ಕಣವಿ
ಕಾವ್ಯ
ಸಂಪುಟ
೪

ಮಧುಚಂದ್ರ

ಚೆನ್ನವೀರ ಕಣವಿ



ಮಧುಚಂದ್ರ

ಚೆನ್ನವೀರ ಕಣವಿ

ತಳುಕಿನ ವೆಂಕಣ್ಣಯ್ಯ ಸ್ಮಾರಕ ಗ್ರಂಥಮಾಲೆ
ಗೋಕುಲಂ ಮೂರನೆಯ ಹಂತ, ಮೈಸೂರು - ೨

MADHUCHANDRA
A Collection of Love poems

Written by
Chennaveera Kanavi

Published by
Talukina Venkaniah Smaraka Granthamale
9, Ramya, Gokulam 3rd stage
Mysore - 570 002

Pages : 88 *Price : Rs. 45/-*

First Impression : 1954
Second Impression : 1962
ತಳುಕಿನ ವೆಂಕಣ್ಣಯ್ಯ ಸ್ಮಾರಕ ಗ್ರಂಥಮಾಲೆಯಿಂದ ಮೊದಲನೇ ಮುದ್ರಣ : 2009

Cover Page : Sudakar Darbe

D.T.P. : **LEKHA GRAPHICS**
Mysore -8 Ph: 2482854

Printing : Good Touch Printers, Mysore

- ಗೆ

ನಿನ್ನೊಲುಮೆ ತಂಗಾಳಿಗರಳಿದೀ ಹೂವುಗಳ
ಕುಸುರು ಕುಸುರಿಗೆ ನಿನ್ನ ಹೆಸರೆ ಹೆಸರು;
ಕಡಲಾಗಿ, ಮೋಡ ಮಳೆವನಿಯಾಗಿ, ಜೇನಾಗಿ
ಹರಿವ ನಿನ್ನೊಲವಿಗೆದೆ ನಿಚ್ಚ ಹಸಿರು.

[illegible]
[illegible]

[illegible]
[illegible]

Published by
[illegible] Granthamala
[illegible]
Mysore [illegible]

Pages : [illegible] [illegible]

First Impression : [illegible]
Second Impression : [illegible]
[illegible]

[illegible]

[illegible]
[illegible]

[illegible]

ಅರಿಕೆ

'ಮಧುಚಂದ್ರ'ದ ದ್ವಿತೀಯ ಆವೃತ್ತಿಗಾಗಿ ಇಲ್ಲಿ ಎರಡು ಮಾತು ಅರಿಕೆ ಮಾಡಿಕೊಳ್ಳಲು ನನಗೆ ಸಂತೋಷವೆನಿಸುತ್ತಿದೆ. ಮೊದಲ ಆವೃತ್ತಿಗಿಂತ ಹೆಚ್ಚಿನ ಬದಲಾವಣೆಯನ್ನೇನೂ ಇಲ್ಲಿ ಮಾಡಿರದಿದ್ದರೂ ಒಂದೆರಡು ಜೋಡಣೆಗಳನ್ನು ಓದುಗರು ಗಮನಿಸಬಹುದು.

ಅನುವಾದ ಎಂದರೆ ಬಹುಶಃ ಅಷ್ಟೊಂದು ಹೊಂದಿಕೆಯಾಗದ, ರವೀಂದ್ರರ ಐದು ಕವಿತೆಗಳ, ಭಾವರೂಪಗಳನ್ನು ಈ ಸಂಗ್ರಹದಲ್ಲಿ ಸೇರಿಸಲಾಗಿದೆ. ಅವೂ ರಸಿಕರಿಗೆ ರುಚಿಸಿಯಾವು ಎಂದುಕೊಂಡಿದ್ದೇನೆ.

ಕವಿಯೇ ತನ್ನ ಕಾವ್ಯದ ಬಗ್ಗೆ ಹೇಳಿಕೊಳ್ಳುವ ಮಾತಿಗೆ ಒಂದು ರೀತಿಯ ಬೆಲೆಯಿರುವುದೇನೋ ನಿಜ. ಆದರೂ ಆ ಕಾವ್ಯದ ಬಗ್ಗೆ ವಿಮರ್ಶಕನ ವಿವೇಚನೆಗೆ ಇನ್ನೂ ಹೆಚ್ಚಿನ ಬೆಲೆಯಿದೆಯೆಂದೇ ನನ್ನ ಭಾವನೆ. ತಮ್ಮ ಕಾವ್ಯಾಲಂಕಾರಶಾಸ್ತ್ರ ಪರಿಣತಿಯ ಜೊತೆಗೆ ಆಧುನಿಕ ವಿಮರ್ಶಾರೀತಿಯನ್ನೂ ಒಲಿಸಿಕೊಂಡಿರುವ ಡಾ. ಕೆ. ಕೃಷ್ಣಮೂರ್ತಿಯವರು ಇಲ್ಲಿಯ ಕವಿತೆಗಳ ಬಗೆಗೆ ನಡೆಸಿರುವ ರಸಾನುಸಂದಾನ ಈ ಆವೃತ್ತಿಗೆ ಒಂದು ಭೂಷಣವಾಗಿದೆಯೆಂದರೆ ತಪ್ಪಾಗದು. ಮೊದಮೊದಲು ಅವರು ಈ ಕಾರ್ಯಕ್ಕೆ ಹಿಂಜರಿದರೂ ಕವಿ-ಕಾವ್ಯ-ಪಕ್ಷಪಾತ ಅವರಿಂದ ಈ ಕೆಲಸ ಮಾಡಿಸಿತು ಎಂದು ತೋರುತ್ತದೆ. ಈ ಬರೆವಣಿಗೆಯನ್ನು ನೆರವೇರಿಸಿಕೊಟ್ಟುದಕ್ಕಾಗಿ ನಾನವರಿಗೆ ಋಣಿಯಾಗಿದ್ದೇನೆ.

ಈ ಎರಡನೆಯ ಆವೃತ್ತಿಯನ್ನು ಮೊದಲಿಗಿಂತಲೂ ಒಪ್ಪವಾಗಿ, ಓರಣವಾಗಿ, ಹೊರತಂದು ತಮ್ಮ ಕಲಾಭಿರುಚಿಯನ್ನು ವ್ಯಕ್ತಗೊಳಿಸಿರುವ ಶಾರದ ಪ್ರಕಟನಾಲಯದ ಮಿತ್ರರಿಗೆ ನಾನು ತುಂಬ ಕೃತಜ್ಞ. ಈ ಸಂಗ್ರಹದ ರೀತಿಯನ್ನು ರಸಿಕರು ಮೆಚ್ಚುವುದಾದರೆ ನನಗೂ ಅವರಿಗೂ ಕೂಡಿಯೇ ಸಂತೋಷ.

ಧಾರವಾಡ

೨೦-೯-೧೯೬೨ — ಚೆನ್ನವೀರ ಕಣವಿ

ಕೃತಜ್ಞತೆಯ ನುಡಿ

ಹಿರಿಯರಾದ ಶ್ರೀ ತ.ಸು. ಶಾಮರಾಯರು ಪ್ರಾರಂಭಿಸಿದ ತಳುಕಿನ ವೆಂಕಣ್ಣಯ್ಯ ಸ್ಮಾರಕ ಗ್ರಂಥಮಾಲೆ ಯನ್ನು ಅವರ ಪುತ್ರ ಶ್ರೀ ಟಿ.ಎಸ್. ಛಾಯಾಪತಿಯವರು ಕಳೆದ ನಾಲ್ಕು ದಶಕಗಳಿಂದ ಯಶಸ್ವಿಯಾಗಿ ಮುಂದುವರಿಸಿಕೊಂಡು ಬಂದು ಅನೇಕ ಮೌಲಿಕ ಕೃತಿಗಳನ್ನು ಪ್ರಕಟಿಸುವು ದಲ್ಲದೆ 'ಅತ್ಯುತ್ತಮ ಪ್ರಕಾಶನ ಪ್ರಶಸ್ತಿ' (೧೯೯೯)ಯನ್ನು ಪಡೆದ ಶ್ರೇಯಸ್ಸಿಗೂ ಪಾತ್ರರಾಗಿದ್ದಾರೆ. ಈ ಗ್ರಂಥ ಮಾಲೆಯಲ್ಲಿ ನನ್ನ ನಾಲ್ಕು ಪುಸ್ತಕಗಳು ಅಚ್ಚುಕಟ್ಟಾಗಿ ಪ್ರಕಟಗೊಂಡಿರುವುದನ್ನು ಇಲ್ಲಿ ಕೃತಜ್ಞತೆಯಿಂದ ಸ್ಮರಿಸಿಕೊಳ್ಳುತ್ತೇನೆ.

ನನ್ನ 'ಸಮಗ್ರ ಕಾವ್ಯದ' ಮೂರು ಆವೃತ್ತಿಗಳು ಪ್ರಕಟಗೊಂಡಿದ್ದರೂ ವಿದ್ಯಾರ್ಥಿಗಳ ಹಾಗೂ ಸಾಮಾನ್ಯ ಓದುಗರ ದೃಷ್ಟಿಯಿಂದ ಬಿಡಿಕವನ ಸಂಗ್ರಹಗಳ ಪ್ರತಿಗಳೂ ಅವರಿಗೆ ಲಭ್ಯ ವಾಗುವದು ಪ್ರಯೋಜನಕರವೆಂದು ಭಾವಿಸಿ, ಸ್ವತಃ ಲೇಖಕರೂ ಆಗಿರುವ ಪ್ರಕಾಶಕ ಛಾಯಾಪತಿಯವರು ಪ್ರಸ್ತುತ ಮಾಲೆಯನ್ನು ಪ್ರಾರಂಭಿಸಿದ್ದಾರೆ. ಅದಕ್ಕೆ ತಕ್ಕ ರಕ್ಷಾಪುಟದ ವಿನ್ಯಾಸವನ್ನು ಸುಂದರವಾಗಿ ರಸಿಚಿಕೊಟ್ಟ ಖ್ಯಾತ ಕಲಾವಿದ ಶ್ರೀ ಸುಧಾಕರ ದರ್ಭೆ ಯವರಿಗೂ ಈ ಯೋಜನೆಯ ಮುಖ್ಯ ಪ್ರೇರಕರಾದ ಶ್ರೀಛಾಯಾಪತಿ ಯವರಿಗೂ ನನ್ನ ವಂದನೆಗಳು.

ಚೆನ್ನವೀರ ಕಣವಿ

ಧಾರವಾಡ
೧ - ೬ - ೨೦೦೯

ರಸಾನುಸಂಧಾನ

'ಉಸುರಿನ ಪರಿಮಳವಿರಲು ಕುಸುಮದ ಹಂಗೇಕಯ್ಯಾ?'
'ಮಾಣಿಕ್ಯದ ಬೆಳಗುಳ್ಳೊಡೆ ದೀಪದ ಹಂಗೇಕೋ?
ಕಾಮಧೇನು ಕರೆವೊಡೆ ಕರುವಿನ ಹಂಗೇಕೋ?'

ಹೊಸಗನ್ನಡದ ರಸಕವಿಗಳಲ್ಲಿ ಚೆನ್ನವೀರ ಕಣವಿ ಆಗಲೇ ಹೆಸರಾಂತಿದ್ದಾರೆ. 'ನುಡಿದರೆ ಮುತ್ತಿನ ಹಾರದಂತಿರಬೇಕು; ನುಡಿದರೆ ಮಾಣಿಕ್ಯದ ದೀಪ್ತಿಯಿಂತಿರಬೇಕು; ನುಡಿದರೆ ಸ್ಫಟಿಕದ ಸಲಾಕೆಯಂತಿರಬೇಕು' ಎಂಬ ಆದರ್ಶ ಅವರ ಕವಿತೆಯ ಬಿಡಿನುಡಿಗಳಲ್ಲಿಯೂ ಕುಡಿಗೊಂಡು ಕನ್ನಡ ರಸಿಕರನ್ನು ತಣಿಸುತ್ತಿದೆ. ಕನ್ನಡ ಕವಿತೆಯಲ್ಲಿ ಹೊಸ ಹಸಿರು, ಹೊಸ ಉಸಿರು, ಹುಲುಸಾಗಿ ಸೂಸುವಂತೆ ಅವರು ತಮ್ಮದೇ ಆದ ರೀತಿಯಿಂದ ಹವಣಿಸಿದ್ದಾರೆ. ಹಿರಿಯರ ಪ್ರೀತಿಯನ್ನೂ ಹರೆಯದವರ ವಿಶ್ವಾಸವನ್ನೂ ಸುಲಭವಾಗಿ ಗಳಿಸಿ, ಕಿರಿಯರಿಗೆ ಕಣ್ಮಣಿಯಾಗಿದ್ದಾರೆ ಕಣವಿಯವರು. ಅವರ 'ಮಧು-ಚಂದ್ರ' ಯಾವ ಮುನ್ನುಡಿಯ ಮುಂಭಾರವೂ ಇಲ್ಲದೆ ನಾಡಿನ ಮೂಲೆ ಮೂಲೆಯಲ್ಲಿಯೂ ತನ್ನ ತನಿವೆಳಗನ್ನು ಬೆಳಗಿಸಿ ಎರಡನೆಯ ಆವೃತ್ತಿಯನ್ನು ಈಗ ಕಾಣುತ್ತಿದೆ. ಇನ್ನಷ್ಟು ಸವಿಯಾದ ಕವಿತೆಗಳನ್ನು ಕೂಡಿಸಿಕೊಂಡು, ಮತ್ತಷ್ಟು ಮುದ್ರಣದ ಮೈಸಿರಿಯಿಂದ ತುಂಬಿಕೊಂಡು. ಮನಮೋಹಕವಾಗಿರುವ ಈ ಎರಡನೆಯ ಆವೃತ್ತಿಗೆ ಯಾವ ನುಡಿಯ ಹಂಗೇಕೆ? ಬರೆಯಬಲ್ಲ ಅರ್ಹತೆ ಅಧಿಕಾರಗಳು ಕೂಡ ಈ ಲೇಖಕನಲ್ಲಿ ಇಲ್ಲ. ನಿಜವಾಗಿ ಇದೊಂದು ಮೀಸಲುಗವಿತೆಯಾದ್ದರಿಂದ ಬಲ್ಲಿದರು ಬರೆಯುವುದಾದರೂ ಭಾವ ಬೀಸರವಾಗುವುದು; ಜನರಿಗೆ ಬೇಸರವಾಗುವುದು. ಎಂದ ಮೇಲೆ 'ಏಕೆ ಈ ಬರೆವಣಿಗೆ?' ಜನಕ್ಕೆ ಅಗತ್ಯವೆಂದಲ್ಲ, ನನಗೆ ಅಗತ್ಯವೆಂದಲ್ಲ, ಕವಿಗೆ ಅಗತ್ಯವೆಂದಲ್ಲ. ಚೆನ್ನವೀರ ಕಣವಿಯವರು ಗೆಳೆತನದ ಸೆಳವಿನಲ್ಲಿ ನಮ್ಮಿಬ್ಬರ ಪೂರ್ವಾಪರ ವಿವೇಚನೆಯೂ ದಿಕ್ಕುತಪ್ಪುವಂತೆ ಮಾಡಿದ್ದಾರೆ; ಇಷ್ಟೇ ರಹಸ್ಯ. ನಿರಂಕುಶಾಃ ಕವಯಃ ! ಅವರ ಮಾತನ್ನು

ಮೀರಲಾರದೆ ತೋರಿದ ಎರಡು ಮಾತನ್ನು ಬರೆಯುತ್ತಿದ್ದೇನೆ. ಇದು ಮುನ್ನುಡಿಯೋ ಹಿನ್ನುಡಿಯೋ, ಮೆಚ್ಚುನುಡಿಯೋ ಬಿಚ್ಚುನುಡಿಯೋ, ವಿಮರ್ಶೆಯೋ ವಿವರಣೆಯೋ ಗೊತ್ತಿಲ್ಲ. ನನ್ನ ಮಟ್ಟಿಗೆ ಇದೊಂದು ರಸಾನುಸಂದಾನ. ಕವಿಗಳನ್ನು ಕುರಿತು ಬರೆಯಲು ಕವಿಗಳಷ್ಟೇ ಅಧಿಕಾರಿಗಳೆಂಬ ಪ್ರಚಲಿತ ಕಟ್ಟಳೆಯನ್ನು ಪಾಲಿಸದೆ, ನನ್ನ ಎರಡು ಮಾತಿಗೆ ಇಲ್ಲಿ ಎಡೆಗೊಟ್ಟ ಕವಿಗಳ ಔದಾರ್ಯ ನಿಜಕ್ಕೂ ಹೆಚ್ಚಿನದಷ್ಟೇ ಅಲ್ಲ, ಇತರರಿಗೆ ಮಾದರಿಯೂ ಆಗಬಹುದೆಂದು ನನ್ನ ಎಣಿಕೆ.

I

ಹೊಸಗನ್ನಡ ಸಾಹಿತ್ಯದಲ್ಲಿ ಮಾಘಮಾಸ ಹೋಗಿ ಚೈತ್ರ ಮೂಡಿ ಬರುವ ಮುನ್ನ ನಾಡಿನಲ್ಲಿ ಇಂಗ್ಲಿಷ್ ಸಾಹಿತ್ಯದ ಮಹಾಪೂರವೇ ಇದ್ದಕ್ಕಿದ್ದಂತೆ ನುಗ್ಗಿ ಬಂದಿತೆನ್ನಬಹುದು. 'ಅರಲುಗೊಂಡ ಕೆರೆಗೆ ತೊರೆ ಬಂದು ಹಾಯ್ದಂತೆ, ಬರಲುಗೊಂಡ ಸಸಿಗೆ ಮಳೆ ಸುರಿದಂತೆ' ಕಲಿತವರೆಲ್ಲರೂ ಕವಿಗಳಾಗತೊಡಗಿದರು; ಸರವೆತ್ತಿ ಹಾಡಿದರು. ಹಾಡನ್ನು ಬಿಡದೆ ಬೆಳೆಸಿದವರು ಮಹಾಕವಿಗಳಾದರು. ಹಿಂದಿನ ಕಾವ್ಯ ಸಂಪ್ರದಾಯಗಳೆಲ್ಲ ಹಿಂದೆ ಬಿದ್ದು ಹೊಸ ರೀತಿಗಳು ಹುಟ್ಟಿದವು. ಹರಡಿದವು, ಹೊಸದಾದ ಸಾಹಿತ್ಯವಿಮರ್ಶೆಯೂ ಉದಯಿಸಿತು. ಆದರೆ ಹೊಸ ವಿಮರ್ಶೆಯು ಪ್ರಾಚೀನ ಸಾಹಿತ್ಯದ ಕಡೆಗೆ ಮುಖಮಾಡಿ ಹೆಬ್ಬೆಳಸನ್ನು ನೀಡಿದಂತೆ, ಹೊಸಕವಿಗಳ ಕಡೆಗೆ ತಿರುಗಿ ಅವರ ಕೃತಿಗಳ ಬಗೆಗೆ ನಿರ್ದಾಕ್ಷಿಣ್ಯವಾಗಿ ನಿರ್ಣಯಿಸಲು ಮುಂದಾದಂತೆ ತೋರುವುದಿಲ್ಲ. ಸಮಕಾಲೀನ ಕವಿವಿಮರ್ಶೆಯೆನ್ನುವುದು ಅತಿಪ್ರಶಂಸೆ - ಕಟುನಿಂದೆಗಳೆಂಬ ಪುಲಿ ದರಿಗಳನ್ನು ತಪ್ಪಿಸಿಕೊಂಡು ಸಮತೂಕವಾಗಿ ಮಾರ್ಗದರ್ಶನ ಮಾಡುವುದೆಂದು ನಿರೀಕ್ಷಿಸುವುದೇ ದುಸ್ತರ. ಆದರೂ ಕಳೆದ ಎರಡು ದಶಕಗಳಲ್ಲಿ ಅಂಧಪ್ರಶಂಸೆಯ ಕಾವು ಇಳಿದು, ಅಂಧತಿರಸ್ಕಾರದ ಧಗೆ ಕುಂದಿ, ನವ ಕವಿಗಳೂ ವಿಮರ್ಶಕರೂ ಆತ್ಮಪರೀಕ್ಷೆ ಮಾಡಿಕೊಳ್ಳಲು ಸಿದ್ಧರಾಗುತ್ತಿರುವ ಲಕ್ಷಣ ಸಾಹಿತ್ಯದ ಮುನ್ನಡೆಗೆ ಶುಭಲಕ್ಷಣ. ಕಾವ್ಯ ಅಥವಾ ಕವಿತೆಯಲ್ಲಿ ಇದ್ದೇ ತೀರಬೇಕಾದ

ಮೂಲ ಗುಣಾಂಶ ಯಾವುದು? ಅದು ಯಾರ ರಚನೆಯಲ್ಲಿ ಎಷ್ಟರ ಮಟ್ಟಿಗೆ ಇದೆ? ಅದು ಯಾರಲ್ಲಿ ಇಲ್ಲ? ಎಂಬ ಪ್ರಶ್ನೆಗಳನ್ನು ರಸಿಕರೆಲ್ಲರೂ ತಾವೇ ಕೇಳಿಕೊಳ್ಳಬೇಕು. ತಮಗೆ ಒಪ್ಪಿಗೆಯಾಗುವ ಉತ್ತರಗಳನ್ನು ಕಂಡುಕೊಳ್ಳ ಬೇಕು. ಸಾಹಿತ್ಯ ತತ್ತ್ವ ಪ್ರಾಚೀನ ಭಾರತದ್ದಾಗಿರಲಿ, ಗ್ರೀಸಿನದಾಗಿರಲಿ, ಇಂದಿನ ಫ್ರಾನ್ಸಿನದಾಗಿರಲಿ, ಎಲ್ಲಕ್ಕೂ ಸಮಾನ ಪುರಸ್ಕಾರ ದೊರೆಯಬೇಕು. ಸಾಹಿತ್ಯ ತತ್ತ್ವದಲ್ಲಿ ನೂರೆಂಟು ವಾದಗಳಿವೆ, ನಿಜ; ಆದರೆ ಎಲ್ಲ ತಾತ್ತ್ವಿಕರೂ ಒಪ್ಪುವ ಸಮಾನಾಂಶವೂ ಇಲ್ಲದೆ ಇಲ್ಲ. ಅದರ ಪರಿಚಯದಿಂದ ಬರುವ ಸಂಸ್ಕಾರ, ನಮ್ಮ ಕಾವ್ಯಾಭಿರುಚಿಯನ್ನು ಶುಚಿಯಾಗಿಡಬಲ್ಲದು; ಕಾವ್ಯ ಜಗತ್ತಿನಲ್ಲಿ ಅನೇಕ ರೀತಿಯ, ಅನೇಕ ನೀತಿಯ ಕವಿನಿರ್ಮಿತಿಗೆ ಸ್ಥಾನವಿರುವು ದನ್ನು ತೋರಿಸಿಕೊಡಬಲ್ಲುದು.

ಒಂದನಾಡ ಹೊರಟು ಒಂಬತ್ತನಾಡಿದಂತಾಗಿದೆ ಈವರೆಗೆ; ಆದರೆ ಉಪಾಯವಿಲ್ಲ. ಯಾವ ಒರೆಗಲ್ಲಿನ ಮೇಲೆ ಕವಿತೆಯನ್ನು ಇಲ್ಲಿ ತಿಕ್ಕಿ ನೋಡಬೇಕೆಂದಿರುವೆವೋ ಅದರ ಸೂಚನೆಯನ್ನು ಸ್ವಲ್ಪ ಮಟ್ಟಿಗಾದರೂ ಕೊಡದೆ ಹೋದರೆ ಕವಿಗೂ ಅಪಚಾರ, ವಿಮರ್ಶೆಗೂ ಅಪಚಾರ. ಲಕ್ಷಣಶಾಸ್ತ್ರದ ಹೆಸರೆತ್ತಿದ ಕ್ಷಣ ಯಾರೂ ದಿಗಿಲುಬೀಳಬೇಕಾಗಿಲ್ಲ.

'ಸವಿಯು ಸಕ್ಕರೆಯೊಳಗೊ, ಸಕ್ಕರೆಯು ಸವಿಯೊಳಗೊ?
ಸವಿಯು ಸಕ್ಕರೆಯೆರಡು ಜಿಹ್ವೆಯೊಳಗೊ?'

ಎಂಬ ಸಮಸ್ಯೆಯೇ ಸೌಂದರ್ಯಶಾಸ್ತ್ರದ ಬುನಾದಿ. ಜೀವನವೆಂಬ ಬಯಲಿ ನಲ್ಲಿ ಕಾವ್ಯವೆಂಬ ಆಲಯವನ್ನು ಕವಿ ಕಟ್ಟುತ್ತಾನೆ. ಬಯಲೊಳಗೆ ಆಲಯ ವಿರುವಂತೆ ಆಲಯದಲ್ಲಿಯೂ ಬಯಲು (='ಆಕಾಶ' = space) ಇರುತ್ತದೆ. ಜೀವನ ಅಪರಿಮಿತ, ಕಾವ್ಯ ಪರಿಮಿತ, ಎಂದು ಮೇಲ್ನೋಟಕ್ಕೆ ಕಂಡರೂ, ವಸ್ತುತಃ ಜೀವನದ ಜೀವನಾಡಿಗಳಾದ ಮುಖ್ಯಾಂಶಗಳಿಗೆ ಜೀವನಕ್ಕಿಂತಲೂ ಹೆಚ್ಚಿನ ಅನಂತತೆ, ಸಾರ್ಥಕ್ಯ, ಸರ್ವಗ್ರಾಹಕತ್ವ, ಇವು ಕಾಣುವುದು ಕಾವ್ಯ ದಲ್ಲಿಯೇ. ಜೀವನದ ಮೂಲಬೆಲೆಗಳಿಗೆ ಅಪರಿಮಿತ ವಿಸ್ತಾರವನ್ನೂ ಸೌಂದರ್ಯವನ್ನೂ ಕಲೆ ತರಬಲ್ಲದು. ಚಿತ್ರ, ಶಿಲ್ಪ ಮುಂತಾದ ಕಲೆಗಳು

ಚೆಲುವಿನ ಶರೀರವನ್ನು ರೂಪಿಸಬಲ್ಲವೇ ಹೊರತು ಕ್ರಿಯೆಯನ್ನು ರೂಪಿಸಲಾರವು; ಚಿತ್ತವೃತ್ತಿಗಳ ವಿಚಿತ್ರ ಪ್ರವೃತ್ತಿಯನ್ನು ಸಮರ್ಥವಾಗಿ, ಸಮಗ್ರವಾಗಿ, ಬಿಂಬಿಸಬಲ್ಲ ಕಲೆಯೇ ಕವಿತೆ, ಕವಿಪ್ರತಿಭೆಯ ಸೂಕ್ಷ್ಮ ಸಂವೇದನೆ ಜಾಗೃತವಾಗಿರುವಾಗ, ಚಿತ್ತ ವೃತ್ತಿಗಳ ಅಭಿವ್ಯಕ್ತಿಯಲ್ಲಿ ವ್ಯಕ್ತಿಯಿಂದ ವ್ಯಕ್ತಿಗೆ ಭಿನ್ನವಾಗುವ ಅಂಶಗಳಿಗಿಂತಲೂ ಹೆಚ್ಚಾಗಿ, ಸರ್ವಸಾಮಾನ್ಯವಾದ ಮೂಲಭೂತ ಹಾಗೂ ಸಾರಭೂತ ಅಂಶಗಳೇ ಎದ್ದು ಕಾಣುತ್ತವೆ. ಹೀಗೆ ಕವಿಯ ರಸಾವೇಶ ಕವಿತೆಯಾಗಿ ಮಾರ್ಪಡುವಾಗ ಆತನ ಬುದ್ಧಿ, ಭಾವನೆ, ಕಲ್ಪನೆ - ಎಲ್ಲ ಶಕ್ತಿಗಳೂ ಸಮಕಾಲದಲ್ಲಿ ಕೆಲಸಮಾಡಿ, ವಿವಕ್ಷಿತ ಅರ್ಥ (= significance) ಅಪೇಕ್ಷಿತ ಶಬ್ದ (expression) ಎರಡೂ ಅನ್ಯೂನ, ಅನತಿರಿಕ್ತ, ಸೊಬಗಿನಿಂದ ತುಂಬಿಕೊಳ್ಳುವಂತೆ ಆಗುತ್ತದೆ. ಉಕ್ತಿ ಚಮತ್ಕಾರ, ಉಕ್ತ ಚಮತ್ಕಾರ, ಎರಡೂ ಅರ್ಧನಾರೀಶ್ವರನಂತೆ ಒಂದುಗೂಡಿದಾಗ 'ಸಾಹಿತ್ಯ'ವೆನ್ನುತ್ತೇವೆ. ಇವುಗಳಲ್ಲಿ ಸ್ವಲ್ಪ ತೂಕ ತಪ್ಪಿದರೂ ಕವಿ ಇನ್ನೂ ಪ್ರಬುದ್ಧನಲ್ಲವೆಂದು ವಿಮರ್ಶಕನು ತೀರ್ಮಾನಿಸಬಹುದು. ತೂಕ ತಪ್ಪಿದಂತೆ ರಸಿಕನಿಗೆ ಕಾಣದಿದ್ದರೆ ಮಾತ್ರ ಹೆಚ್ಚಿನ ಅನುಸಂಧಾನದ ಅಗತ್ಯ. ವಿವಕ್ಷೆ ಚಮತ್ಕಾರ ಹೀನವಾದರೆ ಶುಷ್ಕ ಶಾಸ್ತ್ರಪಂಕ್ತಿಯಾಗುತ್ತದೆ; ಅಭಿವ್ಯಂಜಕ ಪದಾವಲಿ ಶುಷ್ಕವಾದರೆ ಕಾವ್ಯಾರ್ಥ ಬರಡಾಗುತ್ತದೆ. ಯಾವುದಕ್ಕೆ ಕೊರತೆಯಾದರೂ ಕಾವ್ಯಗುಣ ಕುಂದುತ್ತದೆ. ಕೊರತೆ ಕಾಣದಿದ್ದರೆ ಅಲಂಕಾರವುಂಟೆಂದು ವಿಮರ್ಶಕರು ಮನಗಂಡು, ಅದಕ್ಕೆ ಪ್ರೇರಕವಾದ ರಸಾವೇಶವನ್ನು ಗುರುತಿಸಲು ಹೊರಡುತ್ತಾರೆ. ಹಾಗೆ ಗುರುತಿಸುವಾಗ ಕವಿಯ ಮನೋಧರ್ಮದ ಸಹಜ ಗುಣಗಳ ಪರಿಚಯವಾಗುತ್ತದೆ. ಪ್ರಸನ್ನ, ಕೋಮಲ, ಅಥವಾ ಸುಕುಮಾರ ಮನೋಧರ್ಮದ ಕವಿಗಳಿಗೂ ಉದ್ಭಟ, ಉದ್ಧತ, ಮಹೋಜ್ಜ್ವಲ, ಮನೋಧರ್ಮದವರಿಗೂ ಇರುವ ಅಂತರ ಸ್ಪಷ್ಟವಾಗಿ ಎದ್ದು ಕಾಣುವಂಥದು. ರಸಿಕರಿಗೆ ರಸಾಸ್ವಾದದ ಕಾಲದಲ್ಲಿ ತಮ್ಮ ಅನುಭವದ ಪ್ರತಿರೂಪವೇ ಕವಿಯದೆಂಬ ಅಪರೋಕ್ಷ ಜ್ಞಾನವಾಗುತ್ತದೆ. ರಸಿಕರ ಅಭಿರುಚಿಗನುಸಾರವಾಗಿ ಕೆಲವರಿಗೆ ಮೊದಲನೆಯ

ಮನೋಧರ್ಮದ ಕವಿಗಳು ಮೆಚ್ಚಾದರೆ, ಇತರರಿಗೆ ಎರಡನೆಯ ಮನೋಧರ್ಮದವರು ಹೆಚ್ಚು ಮೆಚ್ಚಾಗಬಹುದು. ಆದರೆ ಎಲ್ಲರಿಗೂ ಏಕರೀತಿಯಾಗಿ ಮೆಚ್ಚಾಗುವ ಗುಣವೆಂದರೆ ಮೂರನೆಯದಾದ ಮಾಧುರ್ಯ. ಈ ಮನೋಧರ್ಮದ ಮೂಲವಸ್ತುವೇ ಪ್ರೇಮ. ಪ್ರೇಮಗೀತೆಗೆ ಜಗತ್ತಿನ ಸಾಹಿತ್ಯಗಳಲ್ಲೆಲ್ಲ ಹಿರಿದಾದ ಸ್ಥಾನವುಂಟು. ಪ್ರೇಮದ ಪ್ರಪಂಚ ದೊಡ್ಡದು. ಕ್ಷಣಿಕವಾದ ಕಾಮಕ್ಕೂ ಇಡಿಯ ಜೀವನವನ್ನೇ ರೂಪಿಸುವ ಪ್ರೇಮಕ್ಕೂ ಅಜಗಜಾಂತರ. ಪ್ರೇಮದ ಅನಂತ ವಿಸ್ತಾರವನ್ನು ಕುರಿತು ಎಷ್ಟೆಷ್ಟು ಕವಿಗಳು ಹಿಂದೆ ಹಾಡಿದ್ದರೂ, ಇಂದಿನ ಕವಿಗಳು ಅದನ್ನು ಬಿಡಬೇಕಾದ ಪ್ರಸಂಗವೊದಗಿಲ್ಲ. 'ಮುಗಿಲಗಲ', 'ಜಗದಗಲ'ವಾಗಿದೆ ಪ್ರಣಯಪಯೋಧಿ. ಶೃಂಗಾರರಸ ಎಲ್ಲರಿಗೂ, ಇಂದಿಗೂ, ಎಂದಿಗೂ, ಬೇಕಾಗಿದೆ. 'ಶೃಂಗಾರ ಏವ ಮಧುರಃ ಪರಃ ಪ್ರಹ್ಲಾದನೋ ರಸಃ'.

ಇಂದಿನ ಕಥೆ, ಕಾದಂಬರಿ, ನಾಟಕಗಳಲ್ಲಿ ಬರುವ ಗಂಡು -ಹೆಣ್ಣುಗಳ ವರ್ತನೆಯೆಲ್ಲ 'ಶೃಂಗಾರರಸ'ಕ್ಕೆ ನಿದರ್ಶನವೆಂದು ಭ್ರಮಿಸಲಾಗದು. ವ್ಯಕ್ತಿಗತ ವೈಪರೀತ್ಯಗಳ ವರ್ಣನೆಯೆಲ್ಲ 'ರಸ'ವಲ್ಲ. ಜೀವನದ ಮೇಲ್ಪದರದ ವಿಕ್ಷಿಪ್ತ ವಿದ್ಯಮಾನಗಳು ರಸಸಾಮಗ್ರಿಯಲ್ಲ; 'ರಸಾಭಾಸ'ಕ್ಕೂ ಸಾಮಗ್ರಿಯಾದಾವ್ರೋ ಇಲ್ಲವೋ ಹೇಳುವುದು ಕಠಿನ. ಪ್ರೇಮವು ಒಂದು ಜನತೆಯ ಜೀವನದ ಸಂಸ್ಕೃತಿಯ ಮಟ್ಟವನ್ನು ಅಳೆಯುವ ಮೂಲಬೆಲೆ (Value). ಅದರ ಉತ್ತಮವಾದ ಸ್ವರೂಪದ ಪರಿಚಯ, ಅನುಭವ, ಅಭಿವ್ಯಕ್ತಿ - ಇವು ಮಹಾಕವಿಯಿಂದ ಮಾತ್ರ ಸಾಧ್ಯ. ಆದ್ದರಿಂದಲೇ ನಮ್ಮ ನಾಡಿನಲ್ಲಿ ಕಾಳಿದಾಸನಿಗೆ ಎಲ್ಲರಿಗಿಂತ ಹೆಚ್ಚಿನ ಗೌರವ. ಶೃಂಗಾರನಿರೂಪಣೆಗೆ ಹೊರಟ ಕವಿ ತನ್ನ ಅಚಾತುರ್ಯದಿಂದ ತಪ್ಪು ಹೆಜ್ಜೆಯಿಡುವ ಸಂಭವವೇ ಹೆಚ್ಚು. ಗ್ರಾಮ್ಯ, ಅಶ್ಲೀಲ ಮುಂತಾದ ದೋಷಗಳನ್ನು ಸುಸಂಸ್ಕೃತ ಸಮಾಜ ಸುಲಭವಾಗಿ ಮನ್ನಿಸದು. ಆದುದರಿಂದ ನಮ್ಮ ಹಿಂದಿನವರಲ್ಲಿಯೂ ಶೃಂಗಾರರಸವನ್ನೇ ಕುರಿತು ಬರೆದವರ ಸಂಖ್ಯೆಯನ್ನು ಕೈಬೆರಳುಗಳಿಂದಲೇ ಎಣಿಕೆ ಮಾಡಬಹುದು.

III

ಈ ಹಿನ್ನೆಲೆಯಲ್ಲಿ ಹೊಸಗನ್ನಡದ ಪ್ರೇಮಗೀತೆಯ ಸಾಹಿತ್ಯದ ಶಿಖರಗಳನ್ನು ಅವಲೋಕಿಸುವುದಾದರೆ ನಾವು ಕಾಣುವುದೇನು? ಮೊದಲು ಮೊದಲು ಇಂಗ್ಲಿಷ್ ಪ್ರೇಮಗೀತೆಗಳ ಅನುವಾದ, ಅನುಸರಣ, ಅನುಕರಣ: ಆಮೇಲೆ ಇತ್ತ ಬೇಂದ್ರೆ, ಅತ್ತ ಕುವೆಂಪು, ಈ ಅತಿರಥ ಮಹಾರಥರಿಂದ ಒಂದು ಹೊಸ ಚಾಲನೆ - ನಮ್ಮ ಪೂರ್ವದ 'ಕವಿಸಮಯ'ಗಳನ್ನೂ ಪಾಶ್ಚಾತ್ಯ ಭಾವಲಹರಿಯನ್ನೂ ಅರಗಿಸಿಕೊಂಡು ಹೊಸ ಸಮನ್ವಯವನ್ನು ಕುವೆಂಪು ಅವರು ಸಾಧಿಸಿದಂತೆ, ಬೇಂದ್ರೆಯವರು ಮತ್ತೊಂದು ದಿಕ್ಕಿನಿಂದ ಜಾನಪದ ಸಾಹಿತ್ಯಕ್ಕೂ ನೂತನ ಭಾವಾವೇಶಕ್ಕೂ ಸೇತುವೆಯನ್ನು ನಿರ್ಮಿಸಿದರು. ಮುಂದೆ ಬಂದರೆ, ಮನೆ ಮನೆಯಲ್ಲಿಯೂ ನವದಂಪತಿಗಳಿಗೆ ಹೃದಯವೇದ್ಯವಾದ ಅನುಭವದಿಂದ ಅರಳಿಬಂದ 'ಮೈಸೂರು ಮಲ್ಲಿಗೆ'. ಅನಂತರ? ಕನ್ನಡಿಗರ ಹೃದಯಮಂದಿರದಲ್ಲಿ ನೆಲೆಯೂರಿದಂತಿರುವ ಪ್ರೇಮಗೀತೆಯೆಂದರೆ ಕಣವಿಯವರ 'ಮಧುಚಂದ್ರ'.

IV

ನನಗೆ ಈ ಗೀತೆಗಳು ಪ್ರಿಯವಾಗಿರುವುದನ್ನು ವಿವರಿಸುವ ಮೊದಲು, 'ಮಧು-ಚಂದ್ರ' ಎಂಬ ಹೆಸರಿನ ಬಗೆಗೆ ನನ್ನ ಒಂದು ಆಕ್ಷೇಪಣೆಯಿದೆ. ಮೊದಲು ಮುದ್ರಣದ ಮುಖಚಿತ್ರದಲ್ಲಿ ಮಧುಪಾತ್ರೆಯನ್ನು (ಹಾಲಿನ ಬಟ್ಟಲನ್ನು?) ಮಗ್ಗುಲಲ್ಲಿರಿಸಿಕೊಂಡು ಕುರ್ಚಿಯಲ್ಲಿ ಕುಳಿತ ಪ್ರಮದೆಯೊಬ್ಬಳು ಕಿಟಕಿಯ ಹೊರಗೆ ಪೂರ್ಣಿಮಾಚಂದ್ರನನ್ನು ನೋಡುತ್ತಿರುವುದು ಚಿತ್ರಿತವಾಗಿತ್ತು. ಇದು ಕವಿಯ ಆಶಯವಿದ್ದಿರಲಿಕ್ಕಿಲ್ಲ. ಪ್ರಕಾಶಕರ ಆಶೆ. ಚಿತ್ರಕಾರನ ಭಾಷೆ. ಎರಡೂ ಇದರಲ್ಲಿ ಕೂಡಿತ್ತೇನೋ ನಾನು ಕಾಣೆ. ಅಂತೂ ಈ ಆವೃತ್ತಿಯಲ್ಲಿ ಅದು ಇಲ್ಲದಿರುವುದರಿಂದ ಕವಿತೆಯ ಆಕರ್ಷಣೆ ಹೆಚ್ಚಿದೆಯೆಂದೇ ನನ್ನ ಭಾವನೆ. ಕವಿಗಳ ನೂತನ ಸೃಷ್ಟಿಯಾದ ಈ ಶಬ್ದಕ್ಕೆ ಸೂಚ್ಯಾರ್ಥವೇನಿರಬಹುದೆಂದರೂ. ನನ್ನ ಮಟ್ಟಿಗೆ ಇದು ಇಂಗ್ಲಿಷಿನ

'Honey moon' ಎಂಬುದರ ಅಪಾರ್ಥಕ ಪ್ರತಿರೂಪವೆನಿಸುತ್ತದೆ. ಇಂಗ್ಲಿಷಿನಲ್ಲಿ 'Honey' ಎಂಬ ಶಬ್ದ ಪ್ರಣಯಿಗಳ ರೂಢಿಯಲ್ಲಿ ಪ್ರೇಯಸೀ ವಾಚಕ; ಆದರೆ ಕನ್ನಡದಲ್ಲಿ 'ಮಧು' ಶಬ್ದಕ್ಕೆ ಇನಿಯಳೆಂಬರ್ಥ ಬಹುದೂರ; 'ಜೇನು', 'ಮದ್ಯ' ಇವೇ ಪ್ರಸಿದ್ಧಾರ್ಥಗಳು. 'moon'ಎನ್ನುವಾಗ ಇಂಗ್ಲಿಷಿನಲ್ಲಿ ಒಂದು 'ಪಕ್ಷ' (ಶುಕ್ಲ ಇಲ್ಲವೆ ಕೃಷ್ಣ) ನಿಯಮಿತ ಕಾಲಾವಧಿ, ಎಂಬ ಅರ್ಥಗಳುಂಟು. ಇವೆರಡೂ ಕೂಡಿದ 'Honeymoon' ಶಬ್ದದಿಂದ ನವವಧೂವರರು ಏಕಾಂತವಿಹಾರಕ್ಕಾಗಿ ಹೋಗುವ ಕೆಲವೊಂದು ಕಾಲವೆಂಬ ಅರ್ಥ ಇಂಗ್ಲಿಷಿನಲ್ಲಿ ಸಹಜ. ಕನ್ನಡದಲ್ಲಿ 'ಮಧು-ಚಂದ್ರ' ಎಂಬ ಶಬ್ದದಿಂದ ಈ ಅರ್ಥವಂತೂ ಹೊರಡದು. ಮದ್ಯದ ಸೂಚನೆ ವ್ಯರ್ಥ. ಕಥಂಚಿತ್ 'ಮಧುಮಾಸ' ಎಂಬ ಮೂರನೆಯ ಅರ್ಥವನ್ನು ಹಿಡಿದು 'ಶೃಂಗಾರಮಾಸ' ಎಂಬ ಪ್ರಸ್ತುತಾರ್ಥಕ್ಕೆ ಬಂದರೂ 'ಚಂದ್ರ' ಪದದ ಸ್ವಾರಸ್ಯದಿಂದ ಪ್ರೇಮ ವಿಲಾಸ ಎಂದು ಅರ್ಥಯಿಸುವ ಪ್ರಸಂಗವನ್ನು ಲಾಕ್ಷಣಿಕರು 'ನೇಯಾರ್ಥ' ವೆಂಬ ದೋಷವೆನ್ನಬಹುದು. ಇಂಗ್ಲಿಷಿನ ಪದಾನುವಾದಕ್ಕೆ ಕನ್ನಡ ಕವಿಗಳು ಮಾರುಹೋದಾಗ ಇಂತಹ ಅನೌಚಿತ್ಯಗಳಿಗೆ ಎಡೆಯಾಗುತ್ತದೆ.

V

ಸಹಾನುಭೂತಿಯಿಲ್ಲದೆ ಟೀಕೆಮಾಡಬೇಕೆಂಬ. ಕಾರಣದಿಂದ ದೋಷದ ಕಡೆಗೆ ನಾವು ಕೈ ಮಾಡುತ್ತಿಲ್ಲ; ಈ ಪ್ರಯೋಗ ನಿರ್ದುಷ್ಟವೆಂದು ಬೇರೆ ಸಹೃದಯರು ಸಮರ್ಥಿಸಿದರೆ ನಮಗೆ ಸಂತೋಷವೇ. 'ಮಧು'ವಿಂದ 'ವಧುವಿನ ಅಧರಮಧು', 'ಚಂದ್ರ'ನಿಂದ 'ಚಂದ್ರಮಂಚ', 'ಪ್ರೇಮಚಂದ್ರ'. ಇತ್ಯಾದಿ ಸೂಚಿತಾರ್ಥಗಳು ಕವಿಗೆ ಇರಲೂಬಹುದು. ಒಂದರಿಂದ ಒಂಬತ್ತನ್ನು ಧ್ವನಿಸುವುದೇ ಕವಿಪ್ರಯೋಗದ ಯೋಗಸಿದ್ಧಿ. ಕಿರಿದರಲ್ಲಿ ಪಿರಿದರ್ಥವನ್ನು ಅಡಗಿಸಿಡುವ ಕಾವ್ಯ ಗುಣವನ್ನು ಅಲಂಕಾರಿಕರು 'ಶ್ಲೇಷ' ವೆನ್ನುತ್ತಿದ್ದರು. ಶ್ಲೇಷವೆಲ್ಲ ಕ್ಲೇಶವೆನಿಸುವಂತೆ ಇದನ್ನು ಅತಿಯಾಗಿ ಹಿಂಜಿದವರೂ ಉಂಟು. ಮಿತವಾಗಿ, ಹಿತವಾಗಿ, ಸಮಯೋಚಿತವಾಗಿ, ಬಂದಾಗ

ಶ್ಲೇಷೆಗಿಂತ ಹೆಚ್ಚಿನ ಕಾವ್ಯಕಲೆಯೇ ಇಲ್ಲ. ಬಾಣನು ಹೇಳಿದಂತೆ 'ಶ್ಲೇಷೋಽಕ್ಲಿಷ್ಟಃ - ಸ್ಫುಟೋರಸಃ' ಎರಡೂ ಕೂಡುವುದು ಕವಿಶಕ್ತಿ ಅಧಿಕವಾದವನಲ್ಲಿ ಮಾತ್ರ. ಇತ್ತ ಶಬ್ದಕ್ಕೂ ಅತ್ತ ಅರ್ಥಕ್ಕೂ ಏಕಕಾಲದಲ್ಲಿ ಬಹುಮುಖ ದೀಪ್ತಿ ಬರುವುದು ಶ್ಲೇಷೆಯಿಂದಲೇ. ಒಂದೇ ಶಬ್ದದಿಂದ ಎರಡು ಶಬ್ದಗಳ ಕೆಲಸ ಮಾಡಿಸುವ ಕಲೆ - ಉದಾ : ಆ ರತಿ; ಆರತಿ - ಶಬ್ದಶ್ಲೇಷೆಯಾದರೆ ಒಂದೇ ಪದಾವಲಿಯಿಂದ ಎರಡು ಮೂರರ್ಥಗಳ ದ್ಯೋತನಕಲೆ ಅರ್ಥ ಶ್ಲೇಷೆ.

ಉದಾ :

ತಾವರೆಯೆಲೆ ಹೊಚ್ಚಿದಂತೆ ಅಮ್ಮ ಹೊಲಿದ ಕುಂಚಿಗೆ
ನಮ್ಮ ಬಾಲ್ಯ - ಚಿತ್ರ - ಲೀಲೆಗಳ ವಿಶೇಷ ಸಂಚಿಕೆ! ('ಮಗುವಿಗೆ')

ಕಣವಿಯವರ ಕಾವ್ಯಭಂಡಾರದಲ್ಲಿ ಸಹಜಶ್ಲೇಷೆಯ ರತ್ನಕಾಂತಿ ನನ್ನ ಮನಸ್ಸನ್ನು ಬಹುವಾಗಿ ಸೆಳೆದಿದೆ. ಪ್ರಸನ್ನಸುಭಗವಾದ ಅವರ ಕಾವ್ಯಧಾರೆ ವರ್ಣಪೂರ್ಣವಾಗುವುದು ಇದರಿಂದಲೇ. ಈ ಗುಣವೇ ಅತಿಯಾದಾಗ ದೋಷದ ಬಾಗಿಲು ತೆರೆಯುವುದೆಂದು ತೋರಿಸಲು ಕವನಶೀರ್ಷಿಕೆಯು ಹೊಲಿಗೆ ಬಿಚ್ಚುವ ಪ್ರಸಂಗವೊದಗಿತು. ಈ ಗುಣ ಯಾವ ರೀತಿಯಿಂದ ಕವಿತೆಯುದ್ದಕ್ಕೂ ಒಳಬೆಳಗನ್ನು ಒದಗಿಸುತ್ತಾ ಕಣವಿಯವರ ಕಾವ್ಯಕ್ಕೆ ವೈಶಿಷ್ಟ್ಯವನ್ನು ತರುತ್ತಿದೆಯೆಂದು ಸೂಚಿಸಿದರೆ ನನ್ನ ಕೆಲಸವಾಯಿತು.

VI

ಅನಾದಿಕಾಲದಿಂದಲೂ ಕವಿಗಳಿಗೆ ವಿಷಯವಾಗಿರುವ ಪ್ರೇಮವನ್ನು ಕುರಿತು ಹಾಡುವ ಇಂದಿನ ಈ ಕವಿ ತನ್ನದಾದ ಯಾವ ಹೊಸತನವನ್ನು ತೋರಿಸಿದ್ದಾನೆ ಎಂದು ವಿಮರ್ಶಕನು ಪರೀಕ್ಷಿಸಲು ಹೊರಡುವುದು ತಪ್ಪಲ್ಲ. ಛಂದೋಬಂಧದಲ್ಲಿ, ಕಾವ್ಯ ತಂತ್ರದಲ್ಲಿ, ಉಕ್ತಿವಿನ್ಯಾಸದಲ್ಲಿ, ಅರ್ಥವ್ಯಕ್ತಿಯಲ್ಲಿ. ಹೊಸದನ್ನು ನಾವು ನಿರೀಕ್ಷಿಸುತ್ತೇವೆ. ಎಲ್ಲದರಲ್ಲಿಯೂ ಎಲ್ಲ ಕವಿಗಳೂ ವಿಶಿಷ್ಟ ಹೊಸತನವನ್ನು ಕಾಣಿಸಲಾರರು. ಪೂರ್ವಸಿದ್ಧವಾದ ಕಾವ್ಯಕಲ್ಪನೆಗಳನ್ನು, ಪೂರ್ವಕವಿಗಳ ಅನುಭವಸಾರವನ್ನು, ತಮ್ಮ

ರೀತಿಯಿಂದ ಉಪಜೀವಿಸಿಕೊಳ್ಳುತ್ತಾ ಹೊಸದೆನಿಸುವಂತೆ ಮಾಡುವವರೇ ಹೆಚ್ಚು. ಚಂದ್ರ - ಚಕೋರಗಳ, ಮಾವು - ಮಲ್ಲಿಗೆಗಳ, ಪ್ರೇಮರಹಸ್ಯ ಒಂದು ಕಾಲದ ಶೃಂಗಾರ ಕವಿಗಳಿಗೆ ಮಾದರಿಯಾಗಿತ್ತು; ಮನ್ಮಥನ ಬಿಲ್ಲು ಬಾಣಗಳನ್ನೂ, ಮಂತ್ರಿಪುರೋಹಿತರನ್ನೂ ಅವರು ನೋಡಿಬಂದವರಂತೆ ಬಣ್ಣಿಸುತ್ತಿದ್ದರು. ಇನ್ನೊಂದು ಕಾಲದಲ್ಲಿ ರಾಧಾ - ಮಾಧವರ ಶೃಂಗಾರ ವರ್ಣನೆ ಮಧುರ ಭಕ್ತಿಯ ಆವಿಷ್ಕಾರವೆನಿಸುವ ಪರಿಯಲ್ಲಿ ತೊರೆಯಾಗಿ ಹರಿಯಿತು. ಪೌರಾಣಿಕ ಪ್ರಪಂಚದ ಸ್ವರ್ಗೀಯ ವಾತಾವರಣ ಬೃಂದಾವನದ ರಾಸಕ್ರೀಡೆಯಲ್ಲಿ, ಶೌರಿಯ ಯಮುನಾ ತೀರ ವಿಹಾರದಲ್ಲಿ ಸೇರಿಕೊಂಡಿತು. ಇಂದಿನ ಶೃಂಗಾರಕವಿಗಳ ಸಂಸ್ಕಾರದಲ್ಲಿ ಕೀಟ್ಸ್, ಶೆಲ್ಲಿ, ಉಮರ್ ಖಯಾಮ್, ಹಾಫೀಜ್ ಮೊದಲಾದ ದೇಶಾಂತರದ ಕವಿಗಳ ಕಲ್ಪನಾ ವಿನ್ಯಾಸವೂ ಪ್ರವೇಶಗೊಂಡಿದೆ. ಪೂರ್ವಕವಿಗಳ ಮಾರ್ಗವು ಇಂದಿನ ಜನರಿಗೆ ಅದೇ ರೂಪದಲ್ಲಿ ರಂಜಕವಾಗುವುದು ಕಠಿನ. ಮಾರ್ಗ ಹೊಸದಾಗಲು ಕವಿಯು ನೇರವಾಗಿ ಇಂದಿನ ಜೀವನದ ಅನುಭವದಿಂದ ಬಂದ ಅಂಶಗಳನ್ನು ತನ್ನ ಪಾಠಕರಿಗೆ ಚಮತ್ಕಾರವಾಗಿ ಉಪಯೋಗಿಸುವುದು ಅಗತ್ಯವಾಗುತ್ತದೆ. ಭಾವೋತ್ಕಟನೆ, ಭಾವಸಾಂದ್ರತೆ ಅಥವಾ ಭಾವತೀವ್ರತೆ ಆಧುನಿಕ ಜೀವನದ ವೈಶಿಷ್ಟ್ಯ ಗ್ರಾಸಿಯಾದ ಅಲಂಕಾರಗಳನ್ನು ಸೃಷ್ಟಿ ಮಾಡಲು ಸಮರ್ಥವಾದಾಗ ಮಾತ್ರ ಸಾರ್ಥಕ್ಯವನ್ನು ಪಡೆಯಬಲ್ಲದು. ಈ ತತ್ತ್ವವನ್ನು ಕಣವಿಯವರು ಚೆನ್ನಾಗಿ ಮನಗಂಡಿರುವುದು ಕನ್ನಡಕಾವ್ಯಕ್ಕೆ ಒಂದು ವಿಶ್ವಾಸವನ್ನೂ ಪ್ರತ್ಯಾಸೆಯನ್ನೂ ನೀಡುವಂತಹದು. ಇಂದಿನ ಬಾಳಿನಲ್ಲಿ ಎಲ್ಲರ ಅನುಭವದಲ್ಲಿರುವ ಅಂಶಗಳ ಅಜ್ಞಾತ ಅಂತಸ್ಸೂಕ್ಷ್ಮ ವನ್ನು ಸಂವೇದನಶಕ್ತಿಯಿಂದ ಗ್ರಹಿಸಿ, ಎಲ್ಲರಿಗೂ ಆಸ್ವಾದ್ಯವಾಗುವಂತೆ, ಮನಸ್ಸನ್ನು ಕ್ಷುಬ್ಧಗೊಳಿಸದಂತೆ, ಹೊಚ್ಚಹೊಸದಾದ ಪ್ರತಿಮೆಗಳ ಮೂಲಕ ರೂಪಿಸುವ ಕಲೆ ಕಣವಿಯವರಿಗೆ ಹಸ್ತಗತವಾಗಿರುವುದಕ್ಕೆ ಅವರ ಈಚಿನ ಕವನ ಸಂಗ್ರಹಗಳೆಲ್ಲವೂ ಸಾಕ್ಷಿ. ಆ ಕಲೆಯ ಮೊಳಕೆಗಳು 'ಮಧು-ಚಂದ್ರ' ದಲ್ಲೂ ಗಮನಸೆಳೆಯುವ ಪ್ರಮಾಣದಲ್ಲಿರುವುದನ್ನು ನೋಡಬಹುದು.

'ಮಧುಚಂದ್ರ'ದಲ್ಲಿ ಬೇಂದ್ರೆಯವರ ರಸರಭಸವಿಲ್ಲ, ಕುವೆಂಪು ಅವರ ಪ್ರಬೋಧಕ ಜೀವನವಿಮರ್ಶೆಯಿಲ್ಲ, 'ಮೈಸೂರು ಮಲ್ಲಿಗೆ'ಯ ಸಮತಲ ಹೂನಡಿಗೆಯಿಲ್ಲ. ಆದರೆ ಈ ಮೂವರ ಇತರ ಗುಣಾಂಶಗಳು ಮುಪ್ಪುರಿಯಾಗಿ ಕಣವಿಯವರಲ್ಲಿ ಕೂಡಿ, ಹೊಸದೊಂದು ಪಾಕವಾಗಿ ವೈಶಿಷ್ಟ್ಯಪೂರ್ಣವಾಗಿ ಇಲ್ಲಿ ಅಭಿವ್ಯಕ್ತಿಯನ್ನು ಪಡೆದಿವೆಯೋ ಎನಿಸುತ್ತದೆ. ಕುವೆಂಪು ಅವರ ವ್ಯುತ್ಪತ್ತಿ ವೈಶಾಲ್ಯ, ಬೇಂದ್ರೆಯವರ 'ಜನತಾಂತ ದೃಷ್ಟಿ', 'ಮೈಸೂರು ಮಲ್ಲಿಗೆ'ಯ ನರುಗಂಪು ಈ ಮೂರು ಗುಣಗಳಲ್ಲಿ ಬೇರೆ ಬೇರೆ ಪ್ರಮಾಣದಲ್ಲಿ ಬೆರೆತಂತಿವೆ; ಈ ಮೊದಲೇ ಹೇಳಿದಂತೆ ಹೊಚ್ಚ ಹೊಸ ಪ್ರತಿಮೆಗಳ ನಿರ್ಮಾಣವೇ ಕಣವಿಯವರ ವೈಶಿಷ್ಟ್ಯ. ಇವುಗಳ ಸುಂದರ ಸಮ್ಮಿಳನದಿಂದ ಕಣವಿಯವರ ವಾಣಿ ಎದೆಯನ್ನು ತಾಗಿದೊಡನೆ ಸಹೃದಯರನ್ನು ತಲೆದೂಗಿಸುತ್ತದೆ, ಬಿಲ್ಲುಗಾರನ ಬಾಣದಂತೆ -

"ಕಿಂ ಕವೇಸ್ತಸ್ಯ ಕಾವ್ಯೇನ ಕಿಂ ಕಾಂಡೇನ ಧನುಷ್ಮತಃ;
ಪರಸ್ಯ ಹೃದಯೇ ಲಗ್ನಂ ನ ಘೂರ್ಣಯತಿ ಯತ್ ಶಿರಃ?"

VII

ಇನ್ನು ಕವನಗಳಿಂದ ಆಯ್ದ ಕೆಲವು ಮಾತುಗಳನ್ನು ನೋಡೋಣ. ಒಲವಿನಿಂದ ಮನದನ್ನೆ ಮನೆಯಲ್ಲಿ ನಿಂದೊಡನೆ ಎಲ್ಲೆಲ್ಲಿಯೂ ಚೆಲುವು. ಎಲ್ಲವೂ ಗೆಲವು, ಮನೆಯಂಗಳ ಮಂಗಳಮಯ. ಮೆಲ್ಲೆಲರು ಮಲ್ಲಿಗೆಯೊಡನೆ ಸರಸವಾಡುತ್ತಿದೆ -

ಜತೆಗೂಡುತ ಮಾತಾಡಿವೆ ಅರೆನಿದ್ದೆಯೊಳೇನ?

ಎಂಬ ಸರಸಪ್ರಶ್ನೆ ನಿಸರ್ಗವನ್ನೆಲ್ಲ ವ್ಯಾಪಿಸಿರುವ ಅನುರಾಗದ ನಾಗಬಂಧವನ್ನು ಹೃದಯಂಗಮವಾಗಿ ಧ್ವನಿಸುತ್ತದೆ. ಇವರ ಗುಂಗಿನಲ್ಲಿ ಮೂಕನಾಗಿರುವ ರಸಿಕನಿಗೆ ಕವಿ ತಟ್ಟನೆ ತೆರೆದಿಡುತ್ತಾನೆ ತನ್ನ ಪ್ರೇಮಮೀಮಾಂಸೆಯನ್ನು : ಸಿದ್ಧಾಂತದ ಗದ್ಯದಲ್ಲಲ್ಲ; ಭಾವಗಮ್ಯವಾದ ರೂಪಕದ್ವಯದಿಂದ -

ಲೋಕದ ಮೈನೋವಿಗೆ ಶ್ರೀಗಂಧದ ತನಿಲೇಪ:
ಆಕಾಶದ ಗುಡಿಯಿಂದಲೆ ಹೊರಸೂಸಿದೆ ಧೂಪ!

ಇಷ್ಟು ಸರಳವಾದ ಬರೆವಣಿಗೆ ವಾಚಾಲನಾದ ವ್ಯಾಖ್ಯಾಕಾರನಿಗೆ ಆಸ್ಪದ ವೀಯುವುದಿಲ್ಲ. ರಮಣೀಯತೆಯ ಅನುಸಂಧಾನದಲ್ಲಿ ಅವನು ಲೀನನಾಗುತ್ತಾನೆ. ಇದು ಬಾಳಿನಲ್ಲಿ ಕಾಣುವ ನಲವಿನ ಒಂದು ಮುಖ; ನೋವಿನ ಇನ್ನೊಂದು ಮುಖಕ್ಕೆ ಈ ಸವಿಯ ಸಮಯದಲ್ಲಿ ಪ್ರವೇಶವಿಲ್ಲ. ಈಗ ಕವಿಗೆ ಬಾನ್ ಕರೆಯುವುದು ಜೇನು ಮಾತ್ರ.

ಆನಂದದ ಕಡಲಾಳದಿ ನಾವಾದೆವೆ ಮೀನು!

ಎಂದು ಕವಿಯೇ ಸೋಜಿಗ ಪಡುವಂತಾಗಿದೆ. ಒಳಿತೆಲ್ಲವು ಬೆಳಕಾಗಿರುವಾಗ, ಸವಿನೆನಪಿಗೆ ಮಾತ್ರ ಅಲ್ಲಿ ಸ್ಥಾನವಿದೆ. ಹೊಸ ಕಣ್ಣಿನಿಂದ ಕವಿ ಜಗತ್ತನ್ನು ಈಗ ನೋಡತೊಡಗಿದ್ದಾನೆ. ಎಂದಿನ ಚರ್ಮಚಕ್ಷುವನ್ನು ಮುಚ್ಚಿ ಹೊಸದಿವ್ಯ ಚಕ್ಷುವನ್ನು ತೆರೆದಿದೆ ಅನುರಾಗದ ಪ್ರಥಮಾನುಭವ. ಇದನ್ನೇ ಸಂಸ್ಕೃತದ ಕವಿಯೊಬ್ಬನು-

ದಿವ್ಯಚಕ್ಷುರಹಂ ಜಾತಃ ಸರಾಗೇಣಾಪಿ ಚಕ್ಷುಷಾ...

ಎಂದು ಹಾಡಿದ್ದಾನೆ. ಹೀಗೆ ಕವಿ ಆಕ್ಷೇಪಣೆ ಮಾಡುವವರ ಅಸ್ತ್ರವನ್ನೇ ಕಸಿದುಕೊಳ್ಳುವಂತೆ ತನ್ನ ಕವಿತಾವಿಶ್ವದ ವ್ಯಾಪ್ತಿ ಇಷ್ಟೇ ಎಂದು ಜಾಣ್ಮೆಯಿಂದ ಮೊದಲೇ ನಿವೇದಿಸಿದ್ದಾನೆ.

ಮುಂದಿನ ಕವಿತೆಯಲ್ಲಿ ಅರುಣ - ಚೆಂಗುಲಾಬಿಗಳ ಪ್ರೇಮದ ನೇಮ ಹೇಮಕಾಂತಿಯಿಂದ ಕಂಗೊಳಿಸುತ್ತದೆ. ಆ ಗುಲಾಬಿಯನ್ನು ಕೆಣಕಿ ರಮಿಸಲೆಳಸುವ ಗಾಳಿ ಭೃಂಗಗಳು, ಗಾಳಿಯ ಪರಾಜಯ, ಭೃಂಗದ ವಿಜಯ, ಇವು ಕವಿಯ ಮನೋಭಾವಕ್ಕೆ ಬಹು ಸಹಜವಾಗಿ ಹೊಂದಿಕೆಯಾಗುತ್ತವೆ. ಕಾಮೀಸ್ವತಾಂ ಪಶ್ಯತಿ' ಎಂಬ ಕಾಳಿದಾಸನ ಸೂಕ್ತಿಯನ್ನು ಸ್ಮರಣೆಗೆ ತರುತ್ತವೆ. ನ್ನ ಮನದನ್ನೆಗೆ 'ಕಾಮುಕರ ಕಣ್ಣೆಂಜಲಾದ' ಈ ಹೂ ಎಷ್ಟಕ್ಕೂ ಯೋಗ್ಯ ಲ್ಲೆಂಬ ಕಲ್ಪನೆ ಕವಿಯ ವಿಶಿಷ್ಟ ಕಲೆಯ ಕೈಗಂಬವಾಗುತ್ತದೆ. ಒಂದೆ

ಸಾಲಿನಿಂದ ಇಡಿಯ ಪದ್ಯಕ್ಕೆ ರಸಪುಷ್ಟಿಯೊದಗುವ ಈ ಸೂಕ್ಷ್ಮ ಈ ಪ್ರಮಾಣದಲ್ಲಿ ಅನ್ಯತ್ರ ಸಿಕ್ಕುವುದು ವಿರಲ. ಮಳೆನೀರಿಲ್ಲದೆ ಪೊಯ್ಮೀರಿಂದ ಬಂದ ಬೆಳೆಯೇ ನಮ್ಮಲ್ಲಿ ಹೆಚ್ಚು. ಕವಿಕಲ್ಪನೆಯಲ್ಲಿ ಮೆಚ್ಚಬಹುದಾದ ನಾವೀನ್ಯಕ್ಕೆ ಇದು ಒಂದು ಸಣ್ಣ ಉದಾಹರಣೆ. ಇದಿಲ್ಲದವರ ರಚನೆಯಲ್ಲಿ 'ತನ್ನವಸರಕ್ಕಾಗಿ ಹಗಲುಗನ್ನವಸಿಕ್ಕಿದರೆ ಕನ್ನ ಸವೆಯಲಿಲ್ಲ. ಕಳವು ದೊರೆಯ ಲಿಲ್ಲ' ಎಂಬ ನಾಣ್ನುಡಿ ದೃಷ್ಟಾಂತಕ್ಕೆ ಬರುತ್ತದೆ.

ಕವಿಯ ಪ್ರೇಮಮಯ ದೃಷ್ಟಿಗೆ ಕಾಣುವ ಹೂಗಳು ಎಲ್ಲರೂ ಕಾಣುವ ಹೂಜಾತಿಯಲ್ಲ. ವಿಶಿಷ್ಟವಾಗಿ 'ಈ ಮಲ್ಲಿಗೆ... ಈ ಗುಲಾಬಿ'; ಅವು ಹೇಗಿವೆ?-

ಚೆಲುವಿನೆರಡು ಕಣ್ಣ ಗೊಂಬಿ.

ಮಂಜುಹನಿಗಳು ಇಳೆಗಿಳಿದ ಅಪ್ಸರೆಯರು. ಮುಂಜಾವಿನ ಚೆಂಬೆಳಗು ಒಲವಿನಗ್ನಿಕುಂಡದಲ್ಲಿ ಕರಗಿ ಮಿರುಗುವ ಆರತಿಯೇ ಸರಿ. ಆದ್ದರಿಂದಲೇ

ಇಲ್ಲಿ ಎಲ್ಲ ಪ್ರೀತವು
ಮಾತು ಕೂಡ ಗೀತವು!

ಇದನ್ನೇ ಈ ಕವನಸಂಗ್ರಹದ ಸಮಗ್ರವರ್ಣನೆಯೆಂದರೂ ಸಲ್ಲುತ್ತದೆ. ನಿಸರ್ಗದ ಚಿಕ್ಕೆ ಚಂದ್ರರಂತೆ, ಅಲರು ಎಲರುಗಳಂತೆ, ಚಿಟ್ಟೆ ತುಂಬಿಗಳೂ ಈ ಪ್ರೇಮ ಪ್ರಪಂಚದ ಪ್ರಾತಿನಿಧಿಕ ಪ್ರಜೆಗಳಾಗಿದ್ದಾರೆ.

ಹೀಗೆಯೇ ಒಂದೊಂದೂ ಕವಿತೆಯನ್ನು ವಿವರವಾಗಿ ಸಿರವಿಸುತ್ತ ಹೋಗುವ ಶಿಕ್ಷಕನ ಸಹಜೋತ್ಸಾಹಕ್ಕೆ ಸ್ವಲ್ಪ ತಡೆ ಹಾಕದಿದ್ದರೆ ವಾಚಕರಿಗೆ ಗೌರವ ಮಾಡಿದಂತಾಗದು. ಇನ್ನು ಈ ಸಂಗ್ರಹದಲ್ಲಿ ಅಲ್ಲೊಂದು ಇಲ್ಲೊಂದು ಸಾಲನ್ನು ಮಾತ್ರ ಕೈ ಮಾಡಿ ತೋರಿಸಿ ಅಳತೆಯಿಲ್ಲದೆ ಬೆಳೆಯು ತ್ತಿರುವ ಈ ಬರೆಹಕ್ಕೆ ಪೂರ್ಣ ವಿರಾಮವನ್ನು ಕಾಣಿಸಬೇಕಾಗಿದೆ.

VIII

ಮಕ್ಕಳಾಟದ ಅರ್ಥಹೀನ ಪಲ್ಲವಿ- 'ಗಿರಿಗಿರಿ ಗಿಂಡಿ, ಇಬತ್ತಿ ಉಂಡಿ'. ಈ ಪಲ್ಲವಿಯನ್ನು ಮಹಾರ್ಥಮಂಜರಿಯಾಗಿ ಪಲ್ಲವಿಸುವಂತೆ ಕಲ್ಪನೆಯ ನೀರೆರೆದಿರುವ ಕವಿಕೌಶಲ ವಿಸ್ಮಯಾವಹವಾಗಿದೆ. ನವವಧೂವರರ ಮಧುರಾಲಾಪ ಎಷ್ಟೋ ವೇಳೆ ಒಂದು ದೊಡ್ಡ ಮಕ್ಕಳಾಟಿಕೆಯೇ ಎಂಬ ಸತ್ಯವನ್ನು ಈ ಕವಿತೆ ಬಹಳ ಧ್ವನಿಪೂರ್ಣವಾಗಿ ಬಿಂಬಿಸುತ್ತದೆ. ಇಷ್ಟು ನೆಲಮಟ್ಟದಲ್ಲಿ ಹಾರುವುದು ಮುಗಿಲು ಮುಟ್ಟುವ ಹಕ್ಕಿಗಳಿಗೂ ಆಗದ ದುಷ್ಕರ ಸಾಧನೆ.

IX

'ಸಾನೆಟ್' ಕಾವ್ಯರೂಪದಲ್ಲಿ ಸಿದ್ಧಿ ಸಿಕ್ಕುವುದು ಸುಲಭವಲ್ಲ. ಸಂಯಮ - ಆವೇಶಗಳೆರಡನ್ನೂ ಕೂಡಿ ನಡೆಯಿಸುವ ಅಸಿಧಾರಾವ್ರತ ಅದು. ಗಾಂಭೀರ್ಯ - ಪ್ರಸನ್ನತೆ, ತಾಳ - ಲಯ, ಪ್ರಾಸ - ಗತಿ, ಶಬ್ದ ನೈರ್ಮಲ್ಯ - ಪ್ರಾಗಲ್ಭ್ಯ, ಎಲ್ಲ ಒಂದು ಪಾಕಕ್ಕೆ ಬಂದಾಗ ಈ ರೂಪ ಕವಿಯ ವಶವರ್ತಿಯಾಗುತ್ತದೆ. ಕಣವಿಯವರ ಈ ಸಂಗ್ರಹದ ಸಾನೆಟ್‌ಗಳಾದರೂ ಅವರ ಅಭಿಜ್ಞತೆಯ ದೀಪ ಸ್ತೂಪಗಳಂತಿವೆ. 'ಅಶ್ರುತ-ಗಾನ'ದ ಹೃದಯೈಕವೇದ್ಯ ಅನುಭವ

ಬಾನತುಂಬೆಲ್ಲ ನಿಶ್ಶಬ್ದ ಶಬ್ದಾಂಬೋಧಿ

ಎಂದು ಅನುರಣಿಸಿ, ಅಂಬರ ನುಡಿಸುವ ಗುಡುಗಿನ ಮೃದಂಗ, ಸೂರ್ಯ ಚಂದ್ರರ ತಾಳಕ್ಕೆ ನರ್ತಿಸುವ ವಿಶ್ವನರ್ತಕಿಯ ಚಿತ್ರ, ಅವಳ ಗೆಜ್ಜೆ ಮಿಂಚು ಹರಿದು ಸೂರೆಯಾದಂತಿರುವ ತಾರಗೆಗಳು, ಕಂಕಣದ ಕಿಂಕಿಣೀಸ್ವರ, 'ಸಣ್ಣನೆಯ ಸೇವಿಗೆಯ ಎಳೆಯ ಹೊಸೆ ಹೊಸೆದಂತೆ...' ಬರುವ ಗಾನ, ಇವುಗಳೆಲ್ಲವನ್ನೂ ಒಂದು ಪ್ರತಿಭೋನ್ಮೇಷದಲ್ಲಿ ಕಾಣಬಲ್ಲ ಕವಿಯನ್ನು ಎಷ್ಟು ಹೊಗಳಿದರೂ ಕಡಿಮೆಯೇ. ಇದಕ್ಕೆ ತಕ್ಕ ಹಳೆಗನ್ನಡ, ಸಂಸ್ಕೃತ,

ಶಬ್ದಪುಂಜ ಗಳೂ ಅವನ ಕೈವಶವಾಗಿರುವುದು ಚೆನ್ನಕ್ಕೆ ಪರಿಮಳವಿಟ್ಟಂತಾಗಿದೆ.

X

ಪ್ರಿಯಾವಿರಹದಲ್ಲಿ ಸಂಗಮಕ್ಕಿಂತ ಹೆಚ್ಚಿನ ಸ್ವಾರಸ್ಯವನ್ನು ಸಂಸ್ಕೃತ ಕವಿಗಳೇ ಎಷ್ಟೋ ರೀತಿಯಲ್ಲಿ ಹೇಳಿದ್ದಾರೆ. ಆದರೂ -

ಜೇನು ಹನಿಹನಿಯಾಗಿ ಹರಿವುದೊಲವು
ನೆನಹಿಸಲಿ ಜೀವಸವು ಮಧುರತರವು.
ಮನವನಿಮ್ಮೃಗೊಂಡು ರಂಜಿಪಂತೆ
ನೆನಹು ನಲ್ಗನಸಲ್ತೆ? ಅಂತೆ, ಉಂತೆ.

ಎನ್ನುವ ಭಾವ ಹೊಸದಾಗಿ ಹೊಳೆಯುತ್ತದೆ. ಅಂತೆ, ಉಂತೆ, ಎನ್ನುವುದು ಕುಶಲ ಚಿತ್ರಕಾರನು ತನ್ನ ಚಿತ್ರಕ್ಕೆ ಕಡೆಯ ಕೈಯಾಡಿಸಿದಂತಿಲ್ಲವೆ? ನೆನಹಿಗೂ ಕನಸಿಗೂ ಸಾಮ್ಯವನ್ನು ತಿಳಿಸಿ, ವೈಷಮ್ಯವನ್ನು ಸುಮ್ಮನೆ ಒಂದು ಶಬ್ದಾಭಿನಯದಿಂದ ಸೂಚಿಸುತ್ತಿದ್ದಾನೆ ಕವಿ; ಕನಸಿಗಿಂತ ನೆನಹು ಎಷ್ಟೋ ಮೇಲಿನದೆಂದೂ ಪ್ರಯಾಸವಿಲ್ಲದೆ ಸಾಧಿಸುತ್ತಿದ್ದಾನೆ. ಈ ಶಬ್ದತಂತ್ರ ನವೀನವಾಗಿದೆ. ಮಧುರ ಮಿಲನಕ್ಕೆ ಅಡ್ಡವಾಗಿ ಬರುವ ತಡೆಗಳ ಅರಿವಾದಾಗ ಕವಿ ಮೊದಲು

ಹೆಣ್ಣಿನ ಕಣ್ಣಂಚಿನಲಿದೆ ಕಡೆಗಾಣದ ಆಶೆ
ಆ ಕಾಂತಿಯೆ ತಾರಾಪಥದೆಡೆಗೊಯ್ಯುವುದೈಸೆ.

ಎಂದು ಉತ್ಸಾಹವನ್ನು ಮೆರೆದರೂ ನಿರಾಶೆಯ ನಿಟ್ಟುಸಿರೇ ಕಡೆಗೆ ನಿಲ್ಲುತ್ತದೆ:

ಓ ಎಂದಿಗೆ ಇನ್ನೆಂದಿಗೆ ನೋಂತರ ಸಮ್ಮಿಲನ?
ಹೊಸಬಾಳಿನ ಹೊಸಹಾಡಿಗೆ ರಸಮಯ ಸಂಸ್ಕರಣ?

ಇದು ನಮ್ಮ ಸಮಾಜಕ್ಕೆ ಕಣಿಪಿಯುವರು 'ಕಾಂತಾಸಮ್ಮಿತ'ವಾಗಿ ಮಾಡುವ ಉಪದೇಶದ ರೀತಿ.

ಪ್ರಣಯದ ನೈರಾಶ್ಯವನ್ನೇ 'ನಲ್ಮೆ' ಎದೆಗರಗುವಂತೆ ಚಿತ್ರಿಸಿದೆ - ಒಂದು ಹೂವಿನ ಜೀವನದಲ್ಲಿ. ಒಡನೆಯೇ ಮತ್ತೆ ಪ್ರೇಮದ 'ನವೋದಯ' ಕವಿತೆಗೂ ನವಚೈತನ್ಯವನ್ನು ತರುತ್ತದೆ. ಅಲ್ಲಿ ಬರುವ ಮೂರು ಶಬ್ದ ಚಿತ್ರಗಳು :

'ಮೂಡಣದ ಕೋಡಿಯೊಡೆಯಿತು...'
'ಕಾರಿರುಳ ಕುರುಡಿಂಗೆ ಕಣ್ಣು ಬಂತು!...
'ಜೀವದೇವರ ಮಿಲನ ಝೇಂಕರಿಸಿತು!

ಮೂರು ಮೂರು ಮುತ್ತುಗಳು. ಕವಿಯ ಪ್ರಾಣಪಕ್ಷಿ ಮತ್ತೆ ನೀಲದಲ್ಲಿ ತೇಲತೊಡಗುತ್ತದೆ. ಯಾವುದೋ ಮೂಲೆಯಲ್ಲಿ ಕುಳಿತು ತನ್ನಷ್ಟಕ್ಕೆ ಹಾಡುತ್ತದೆ. ಆದರೆ ಕೇಳುವವರು ಇಲ್ಲವಲ್ಲಾ ಎಂದು ಅವರ ಕೊರಗು; ಮತ್ತೆ ಆಶಾವಾದದ ಸಮಾಧಾನ. ಕವಿ ಇಲ್ಲಿ ತನ್ನ ಎದೆಯಳಲನ್ನು ಪಕ್ಷಿಯ ಮೂಲಕ ಮನೋಹರವಾಗಿ ಮೂಡಿಸಿದ್ದಾನೆ. 'ಮತ್ತೊಂದು ಪುಟ್ಟ ಹಕ್ಕಿಗೆ' ಕವಿತೆಯಲ್ಲಿ ಕವಿ- ಇನಿಯಳ ಗಾನವನ್ನು ಕುರಿತಿದ್ದರೂ ಇರಬಹುದು - 'ಹಾಡು ನಿಲ್ಲಿಸಬೇಡ' ಎಂದು ಬೇಡುತ್ತಾನೆ. ಏಕೆ?

'ದೀಪ ಪಟ್ಟನೆ ಆರಿ ಹೋಗಬಹುದು!
ನನ್ನೆದೆಯ ಕತ್ತಲೆಯು ಕಣ್ಣುಕಪ್ಪಡಿ ಮತ್ತೆ
ಮೂಲೆ ಮೂಲೆಗೆ ಹೋಗಿ ಹಾಯಬಹುದು!

ಈ ಪ್ರತಿಮೆಗಳು ಕಣವಿಯವರ ಮುದ್ರೆಯನ್ನು ಒತ್ತಿಕೊಂಡೇ ಮೂಡಿವೆ. ಮತ್ತೆ ಸೂರ್ಯನ ಉದಯಾಸ್ತಗಳ ಕ್ರಿಯೆಯ ಪ್ರತಿರೂಪವಾಗಿ ಕವಿಕ್ರಿಯೆಯ ಮೋಹಕ ಚಿತ್ರ 'ಸ್ವರ್ಣಪಕ್ಷಿ' ಯಾಗಿದೆ.

ಮತ್ತೆ ಸಾನೆಟ್‌ಗಳು ; ಚಿತ್ರತರಚಿತ್ರಗಳು. ಮುಪ್ಪಾದ ಉಮರ ಖಯ್ಯಾಮನನ್ನು ಹೇಳುವಾಗ

ಮುಪ್ಪಾದ - ಅಲ್ಲಲ್ಲ - ಹರೆಯ
ಒಪ್ಪಂಬೂಸಿ ಕಪ್ಪು ಕಾಣಿಕೆಯಿತ್ತ

ಉಮರನೆನ್ನುವುದನ್ನು ಓದಿ ಕವಿಯಂತೆ ನಾವೂ 'ಏನಿದೇನಗ್ಗಳವೊ!' ಎನ್ನಬೇಕಾಗಿದೆ. ಇದರ ಸಂದೇಶ - 'ಪ್ರೇಮಜೀವಿಯು ಚಿರಂಜೀವಿ'. ಇದೇ ಉಮರನ ಒಸಗೆ. ಅಚ್ಚುಕಟ್ಟಾಗಿ ಬೆಚ್ಚು ಬೆಸುಗೆ ತಪ್ಪದ ಎಚ್ಚರ ಕವಿಯ ಸಾನೆಟ್ಟುಗಳಲ್ಲಿ ಎಲ್ಲೂ ಕಂದುವುದಿಲ್ಲ.

ಮಧುರಮಿಲನವನ್ನು ವರ್ಣಿಸುತ್ತಾ -

ನನ್ನ ಕನಸಿನ ಹೊನ್ನ ತಾವರೆಯ ಹೂವರಳಿ
ಎನ್ನ ಬೊಗಸೆಯೊಳಿಂದು ಕಂಗೊಳಿಸಿದೆ;

ಎಂಬ ಆನಂದೋದ್ಗಾರವಾಗಲಿ, 'ಬಾಳ ಬೀದಿಗೆ ಬೆಳಕು ನುಗ್ಗಿ ಬಂತು' ಎಂಬ ಸಾಲಾಗಲಿ, ಕವಿಯ ಸಹಜಸ್ಫೂರ್ತಿಗೆ ದೀವಟಿಗೆಗಳಂತಿವೆ. ಇದರಂತೆ ಕಣ್ಣೆ ಪ್ರೇಮದೂತನೆಂದು ರೂಪಿಸಿ -

ಯಕ್ಷ ಸಾಕ್ಷಿಗೆ ಮೇಘ ದೂತನಾಗೆ
ಇಂದು ಕಳಿಸಿಹೆನಕ್ಷಿ ಪಕ್ಷಿ ಹಾಗೆ.

ಎಂಬ ಉಪಮೆ, ವಿಶ್ವದಲ್ಲಿ ಮೆರೆದಿರುವ ಪ್ರೇಮವನ್ನು ಬಣ್ಣಿಸುವಾಗ

ಅಲ್ಲಿಂದಿಲ್ಲಿಗೆ ಸಾವಿರ ಮಲ್ಲಿಗೆ
ಚಿಕ್ಕೆಯ ಸೇತುವೆ ತೂಗಿಹುದು;

ಎಂಬ ಕಲ್ಪನೆ, ಕಾಂತೆಯನ್ನು 'ನಗೆಯ ಹೊಂಗೇದಗೆಯ ಮುಗುದೆ'ಯೆನ್ನುವ ಪರಿ, 'ಮಂಜಿ ನರಳೆಯ ಹಿಂಜಿ ತೂರುತಿಹ ನೇಸರ', 'ನಿರೀಕ್ಷೆ'ಯಲ್ಲಿ -

ತುಂಬುಗೈ ಬಾಗಿಲಿಗೆ ಇಂಬುಗೊಟ್ಟಿದೆ, ಕಾಲ
ತುದಿಬೆರಳು ಹೊಸತಿಲಕೆ ಹೂವಾಗಿದೆ...
ಜಡೆಯುದ್ದಕೂ ಚಿಂತೆ ಹೊಯ್ದಾಡಿದೆ.

ಎಂಬ ರಮಣೀಯ ಕಲ್ಪನಾವಿಲಾಸಗಳು, ನವ್ಯತಂತ್ರವನ್ನು ನಿದರ್ಶಿಸುವ 'ಪಯಣ'ದ

ಕಿಟಕಿಯಲಿ ಕರವಸ್ತ್ರ ಒಲುಮೆ ಬಾವುಟದಂತೆ
ಎದೆಯ ತಡಬಡದೊಡನೆ ಮಿಡುಕುತಿತ್ತು.

ಮುಂತಾದ ಸಾಲುಗಳನ್ನು ಸಾಲುಸಾಲಾಗಿ ಇನ್ನು ಬರೆಯುವುದೇಕೆ? ಕವಿಯ ಸಹಜಪ್ರತಿಭೆಯ ವಿಕಾಸವನ್ನೂ ವಿಲಾಸವನ್ನೂ ಸಹೃದಯರು ಸುಲಭವಾಗಿ ಗುರುತಿಸಬಹುದಾಗಿದೆ.

XI

ಪ್ರೇಮದ ವಿವಿಧ ಚಿತ್ತವೃತ್ತಿಗಳ ಈ ಚಿತ್ರಶಾಲೆಯಲ್ಲಿ ವಾತ್ಸಲ್ಯಕ್ಕೂ ಎಡೆ ಸಿಕ್ಕಿದೆ. ಮಗುವಿನ -

ಗಾಳಿಗಡಲಿನಲ್ಲಿ ಹುಟ್ಟು ಕಡೆಯುತಿರುವ ಕೈಗಳು
ಮಲಗಿದಲ್ಲೆ ಬೈಸಿಕಲ್ಲು ತುಳಿವ ಪುಟ್ಟ ಕಾಲ್ಗಳು.

ಯಾರನ್ನು ತಾನೇ ಪರವಶಗೊಳಿಸವು? ಈ 'ಮುಟ್ಟಿಗೆಯ ಬಿಗಿಹಿಡಿದು ಕುಟ್ಟಿ ಗಾಳಿಯ ಒಂಟಿಕುಸ್ತಿಯಾಡುವ ಜಟ್ಟಿ'ಯನ್ನು ಯಾರು ಮರೆತಾರು?

XII

ಈ ಸಂಗ್ರಹದಲ್ಲಿ ಹೊಸದಾಗಿ ಸೇರಿರುವ ರವೀಂದ್ರರ ಕವಿತಾನುವಾದ ಗಳನ್ನು ಕುರಿತು ಒಂದು ಮಾತು. ಸಾಮಾನ್ಯವಾಗಿ ಅನುವಾದ ಕಾರ್ಯ ಸ್ವಯಂಪ್ರಭರಿಗೆ ಸಲ್ಲದ, ಪಂಡಿತವರ್ಗದವರ ದುಡಿಮೆಯೆಂಬ ತಪ್ಪು ಅಭಿಪ್ರಾಯದಿಂದಾಗಿ ಕನ್ನಡದಲ್ಲಿ ಇಂದು ಓದಿ ಆನಂದಿಸುವಂತಹ ಅನುವಾದಿತ ಕೃತಿರತ್ನಗಳ ಸಂಖ್ಯೆ ಸಣ್ಣನಾಗಿಯೇ ಇದೆ. ಅನುವಾದಕರು ಅಪವಾದಕರೆಂಬ ಅಪಪ್ರಥೆ ಹಿಂದಿನಿಂದಲೂ ಉಂಟು. ಇದು ತಪ್ಪಬೇಕಾದರೆ ಸಹಜಕವಿಗಳು ಈ ಕಾರ್ಯಕ್ಕೆ ತಾವಾಗಿಯೇ ಮುಂದಾಗಬೇಕು. ಕಣವಿಯವರ ಕಾವ್ಯಾಕ್ಷಿಯಲ್ಲಿ ಹಾಯ್ದುಬಂದ ರವೀಂದ್ರರ ಸುಭಾಷಿತಗಳು ಕನ್ನಡ ದಲ್ಲಿಯೇ ಹುಟ್ಟಿಬಂದಂತೆ ಭಾಸವಾಗುತ್ತವೆ. ಇವು ಭಾಷಾಂತರವಲ್ಲ

ವೆನಿಸುವಷ್ಟು ಸಹಜವಾಗಿ ಬಂದಿವೆ; ಅಕ್ಷರಶಃ ಪರಿವರ್ತನಕ್ಕೆ ಹೊರತಾದ
ಭಾವದೀಪ್ತಿಯನ್ನೂ ಶಬ್ದಗೀತಿಯನ್ನೂ ಹೊಸದಾಗಿ ಮೂಡಿಸುವ ಇವ
ಅನುವಾದದ ಕಲೆಯನ್ನು ಪುನಸ್ಸೃಷ್ಟಿ ಯೆಂದ
ಅತಿಶಯೋಕ್ತಿಯಾಗಲಾರದು. ಉದಾಹರಣೆಗೆ :-

೧. ಸುಗ್ಗಿ ಬಂದಿತು ಎಲ್ಲ ಲೋಕದಾನಂದವದು
ನನ್ನ ದೇಹದ ಗೇಹರಚನೆಗೆಂದು;
ಮುದ್ದನಿಟ್ಟವು ಬಾನ ಬೆಳಕು ಬಿಟ್ಟೂ ಬಿಡದೆ
ಅವಳು ಎಚ್ಚರಗೊಂಡು ಏಳುವರೆಗು.

('ಸುಗ್ಗಿ ಬಂದಿತು ಎಲ್ಲ ಲೋಕದಾನಂದವದು')

೨. ನಮ್ಮ ತೋಪಿನ ನೆಳಲ ಹಸುರ ಮೇಯಲು ಬಹವು
ಅವಳ ಮುದ್ದಿನವೆರಡು ಕುರಿಮರಿಗಳು;
ಹಾದಿ ತಪ್ಪುತ ನಮ್ಮ ಗೋದಿ ಹೊಲಕ್ಕೆ ತರಲು
ಅಕ್ಕರತೆ ತೋಳಿನಲಿ ತೆಗೆದಪ್ಪಲು! ('ನಾವಿಬ್ಬರು')

ನೀರಸ ಅನುವಾದಗಳಿಂದ ಬೇಸತ್ತ ಜನ ಇಂತಹ ಸುರುಚಿರ ಅನುವಾ
ಗಳನ್ನು ಕಂಡಾಗ ಹಿಗ್ಗುವುದೂ, ಇಂತಹವನ್ನು ಮತ್ತೆ ಮತ್ತೆ ಬಯಸುವುದ
ಹೆಚ್ಚಲ್ಲ.

XIII

ಕಣವಿಯವರ ಈ ಕವಿತಾಸಂಗ್ರಹ ಹತ್ತುವರ್ಷಕ್ಕೆ ಹಿಂದೆ ಬರೆದು
ಅವರ ಅಂದಿನ ಮನೋಗತಿಯ ಒಂದು ಸುಂದರ ಪ್ರತಿಬಿಂಬವಾದ ಇದ
ಜೀವನದ ದುಷ್ಕರ ಸಮಸ್ಯೆಗಳ ಜಂಜಾಟವಿಲ್ಲ, ನವ್ಯಧ್ವನಿಯ ಘೋ
ಘೋಷವಿಲ್ಲ. ಆದರೂ ಸಹಜ ಕವಿತಾಗುಣಗಳ ಆವಿಷ್ಕಾರವಿದೆ. ಜಾ
ಕವಿಚೈತನ್ಯದ ಪರಿಷ್ಕಾರವೂ ಇದೆ.

ಆವುದೋ ಮೂಲೆಯಲಿ ಕುಳಿತು ಭೂರಂಗದಲಿ
ನಡೆವ ಅಕಟೋವಿಕಟ ನಾಟಕದ ಓನ್ನೆಲೆಯ
ಬಗಿದು ನೋಡುವ ಬಯಕೆ ಬಗೆಯೊಳಿದೆ.

ಎಂಬ ಧ್ಯೇಯದ ಪ್ರಕಟನೆಯೂ ಇದೆ. ಮನ್ನಣೆಯ, ಅವರನ್ನು ಸುತ್ತಿನಿಂದಲೂ ಮುತ್ತುತ್ತಿರುವಾಗಲೂ ಆ ಧ್ಯೇಯ ಬೇಗ ಫಲಿಸಲಿ, ನಾಡಿನ ಕಾವ್ಯಕುಂಜ ಹುಲುಸಾಗಲಿ, ಎಂದಿಷ್ಟೇ ಈ ಗೆಳೆಯನ ಹಾರೈಕೆ.

ಕರ್ನಾಟಕ ವಿಶ್ವವಿದ್ಯಾಲಯ
ಧಾರವಾಡ
೧೫-೯-೧೯೬೨

ಡಾ. ಕೆ. ಕೃಷ್ಣಮೂರ್ತಿ

ಪರಿವಿಡಿ

ಮಧುಚಂದ್ರ



೧೯೫೩ರಲ್ಲಿ ಕವಿ ಕಣವಿಯವರು

(ಭಾವಚಿತ್ರ : ನಾರಾಯಣರಾವ್ ಕುಲಕರ್ಣಿ, ವಿಜಾಪುರ)

ಮಧುಚಂದ್ರ

ಬಾ ಮಲ್ಲಿಗೆ
ಬಾ ಮೆಲ್ಲಗೆ
ನನ್ನೆದೆ ಮೆಲ್ಪಾಸಿಗೆ
ಇಳೆಗಿಳಿದಿದೆ
ಬೆಳುದಿಂಗಳು
ನಮ್ಮೊಲುಮೆಯ ಕರೆಗೆ!

ಚೆಲುವಾಗಿದೆ
ಬನವೆಲ್ಲವು
ಗೆಲುವಾಗಿದೆ ಮನವು;
ಉಸಿರುಸಿರಿಗು
ತಂಪೆರಚಿದೆ
ನಿನ್ನೆದೆ ಪರಿಮಳವು.

ತಿಂಗಳ ತನಿ-
ವೆಳಕಲಿ ಮೈ -
ದೊಳೆದಿಹ ಮನದನ್ನೆ!
ಮಂಗಳವೀ
ಮನೆಯಂಗಳ
ಚೆಂಗಲವೆಯ ಚೆನ್ನೆ.
ಹಿತವಾಗಿದೆ
ಮೆಲ್ಲೆಲರುಲಿ
ಮಿತವಾಗಿದೆ ಮೌನ;
ಜೊತೆಗೂಡುತ
ಮಾತಾಡಿವೆ
ಅರೆನಿದ್ದೆಯೊಳೇನ?

ಲೋಕದ ಮೈ -
ನೋವಿಗೆ ಶ್ರೀ -
ಗಂಧದ ತನಿಲೇಪ:

ಆಕಾಶದ
ಗುಡಿಯಿಂದಲೆ
ಹೊರಸೂಸಿದೆ ಧೂಪ.

ಒಳಿತೆಲ್ಲವು;
ಬೆಳಕಾಯಿತು
ಬಾನ್‌ಕರೆಯಿತು ಜೇನು

ಆನಂದದ
ಕಡಲಾಳದಿ
ನಾವಾದೆವೆ ಮೀನು?

ಎವೆಯಿಕ್ಕದೆ
ಮಿನುಗುತ್ತಿವೆ
ಚಿಕ್ಕೆಯ ಹನಿದೀಪ

ತಮ್ಮಷ್ಟಕೆ
ಜಾನಿಸುತಿವೆ
ಯಾವುದೊ ಸವಿನೆನಪ.

ಬಾ ಮಲ್ಲಿಗೆ
ಬಾ ಮೆಲ್ಲಗೆ
ನನ್ನೆದೆ ಮೆಲ್ಹಾಸಿಗೆ -

ಇಳೆಗಿಳಿದಿದೆ
ಬೆಳುದಿಂಗಳು
ನಮ್ಮೊಲುಮೆಯ ಕರೆಗೆ!

ಚೆಂಗುಲಾಬಿ

ಚೆಂಗುಲಾಬಿಯ ಮೊಗ್ಗೆ ಅರುಣನೆಡೆ ಮೊಗವಿರಿಸಿ
ಚೆಂದುಟಿಯನರೆತೆರೆದು ನೋಂಪಿಯಲ್ಲಿ -
ಸಕ್ಕರೆಯ ನಿದ್ದೆಯಲಿ ಸವಿಗನಸ ಕಾಣುತಿದೆ
ಚದುರನೈತಹನೆಂಬ ಹಂಬಲದಲಿ!

ನವುರಾದ ಪಕಳೆಯಲಿ ಕುಂಕುಮ ಪರಾಗವಿದೆ
ಎದೆಯಲ್ಲಿ ಸೌರಭದ ಸೂಸುಗಿಂಡಿ,
ಮೈತುಂಬ ಒಳುಗುಂದದಮಲ ಸುರುಚಿರ ಕಾಂತಿ
ಚೆನ್ನೆಯರ ಕೆನ್ನೆಗಳ ರಾಗಬಂದಿ!

ಮೆಲ್ಲೆಲರು ಮೈದಡವಿ ಗಲಿಸಿ ಗಲ್ಲವ ಸವರಿ
ಸಾಗುತಿರೆ ನಸುನಾಚಿ ಹಿಂದಿನಿಂದ
ರಸಿಕ ಭೃಂಗವು ಬಂದು ಕಿವಿಮಾತನುಸುರುತಿರೆ
ಸವಿಹಾಡಿಗೊಲಿಯುತಿಹ ಮಧುರ ಬಂಧ.

ಜೇನುಂಡ ಕಾದಲನು ಬಳಸಿ ಬಳಿಯಲಿ ಸುಳಿದು
ಆಡಿ ಹಾರಾಡುತಿದೆ ಹೂವ ರಮಿಸಿ
ಒಲಿದ ಮನಕೊಲಿದ ಎದೆ, ಎರಡು ಒಂದಾಗಿರಲು
ಹಾಡುತಿದೆ ಗಾಳಿಗೂ ಗುಂಗು ಹಿಡಿಸಿ!

ಅಲ್ಲಲ್ಲಿ ಬಳುಕುತಿಹ ಬಳ್ಳಿಗಳ ಗೊಂಚಲಲಿ
ಹೂಗಳೆನಿತರಳಿಹವು, ಆದರೇನು
ಈ ಗುಲಾಬಿಯ ಬಣ್ಣ ಕಣ್ಣ ತಣ್ಣನೆ ಬಿಂಬ
ಕೋಮಲತೆ ಒಲುಮೆಗಿದು ತವರು ಜೇನು!

ಹೂವಿನಂತಹ ಹುಡುಗಿ ಈ ಹೂವ ಮುಡಿಯುವಳೆ -
ಹೂವು ಪಡೆದಿಹುದೇನು ಅಂಥ ಭಾಗ್ಯ?
ಕಾಮುಕರ ಕಣ್ಣೆಂಜಲಾಗದಿಹ ಮೀಸಲದ
ಹೂವವಳ ಮುಡಿಯಲ್ಲಿ ಇಹುದೆ ಯೋಗ್ಯ.

ಈ ಮಲ್ಲಿಗೆ ಈ ಗುಲಾಬಿ...!

ಈ ಮಲ್ಲಿಗೆ ಈ ಗುಲಾಬಿ
ಚೆಲುವಿನೆರಡು ಕಣ್ಣು - ಗೊಂಬಿ!
ರಾಗದಾ ಪರಾಗ ತುಂಬಿ
ಬದುಕು ಬಣ್ಣ ಪಡೆಯಿತೆಂಬಿ -
ನಸುಕು ತುಟಿಯ ತೆರೆದಿದೆ
ಜೀವರಸವನೆರೆದಿದೆ!

ಸ್ವರ್ಣಕಿರಣದರುಣ ಕಂದ
ಈ ಸುಗಂಧದಲ್ಲಿ ಮಿಂದ
ಗಾಳಿ ತೀಡೆ ಮಂದ ಮಂದ,
ಆನಂದವೊ ಅನಿರ್ಬಂಧ
ಹೂವಿನಂತೆ ನುಣ್ಣಗೆ -
ಕಂಡ ಕಣ್ಣು ತಣ್ಣಗೆ.

ಮಡಿಯನುಟ್ಟ ಮೆಲ್ಲಿತೆಲರು
ನೆಲದ ಗಲ್ಲ ಮುಟ್ಟೆ ಹಸುರು
ನಿಮಿರಿ ನಿಂತ ಕಲಾಕುಸುರು!
ಇಳೆಗಿಳಿದರೆ ಬಾನಿನವರು
ಮಂಜು ಹನಿಯ ರೂಪದಿ?
ಅಪ್ಸರೆಯರು ಶಾಪದಿ!

ಕಣ್ಣ ಬೆಳಕ ಕಣ್ಣು ಕುಡಿದು
ಹೃದಯದಂತರಾಳಕಿಳಿದು
ಒಲವಿನಗ್ನಿ ಕುಂಡದಲ್ಲಿ
ಕರಗಿ ಮಿರುಗಿ ಹೊಮ್ಮಿತಿಲ್ಲಿ

ಉಷಃಕಾಲದಾರತಿ
ಚೈತನ್ಯದ ಪ್ರದ್ಯುತಿ!

ಈ ಪ್ರಶಾಂತ ಕಾಲದಲ್ಲಿ
ಮೌನವೀಣೆ ಮಿಡಿವುದಿಲ್ಲಿ.
ಈ ಮಹಾಂತ ಧಾಮದಲ್ಲಿ
ಸ್ವರ್ಗ ಭಿಕ್ಷೆ ಬೇಡಿತಿಲ್ಲಿ
ಇಲ್ಲಿ ಎಲ್ಲ ಪ್ರೀತವು
ಮಾತು ಕೂಡ ಗೀತವು!

ಬಂತು ತುಂಬಿ ಗಾನ ತುಳುಕಿ;
ಬಂತು ಚಿಟ್ಟೆ ಬಣ್ಣ ಸೋಕಿ ;
ಒಂದು ಜೇನು ಹನಿಯ ಹುಡುಕಿ
ಒಂದು ಬಣ್ಣಕಾಗಿ ಬೆದಕಿ -
ಭೃಂಗ ಗುಂಗು ಹಿಡಿಸಿತೋ!
ಚಿಟ್ಟೆ ನೃತ್ಯವಾಡಿತು.

ಎಲೆ ಮಲ್ಲಿಗೆ, ಚೆಲು ಗುಲಾಬಿ
ಬಾರ ಚಿಟ್ಟೆ, ಬಾರ ತುಂಬಿ
ಮನದ ತುಂಗ ಶೃಂಗದಲ್ಲಿ
ಎನ್ನ ಹೃದಯರಂಗದಲ್ಲಿ
ದ್ವೈತವಿರದ ಕೂಟದಲ್ಲಿ
ಆತ್ಮನಮರ ತೋಟದಲ್ಲಿ
ಸದಾನಂದದೂಟೆಯಲ್ಲಿ
ಹಾಡಿ ನೃತ್ಯವಾಡಿರೇ
ಚಿರಂಜೀವಿಯಾಗಿರಿ.

ಗಿರಿಗಿರಿ ಗಿಂಡಿ

೧

ಗಿರಿಗಿರಿ ಗಿಂಡಿ
ಇಬತ್ತಿ ಉಂಡಿ
ಸಂಜೆಯ ಗಾಳಿ
ತಂಪೊಳು ತೇಲಿ
ಗರಿಗರಿ ಮೋಡ
ಬಾನಿನ ಕೂಡ
ಮೈಮರೆತೋಟ
ಚಕ್ಕಂದಾಟ;
ಬಣ್ಣದ ಹಕ್ಕಿ
ಕೊರಳಲ್ಲುಕ್ಕಿ
ಸುವ್ವೀ ಚವ್ವಿ
ಹಾಡಿದೆ 'ಟುವ್ವಿ',
ಬನ ಬನದಲ್ಲಿ
ಮನ ಮನದಲ್ಲಿ
ಸಂತಸ ಬೀರಿ
ಹಾಡಿನ ಲಹರಿ
ಮೆಲ್ಲಗೆ ನಿಂತಿ
ಬಾರೇ ಗೆಳತಿ.
ಗಿರಿಗಿರಿ ಗಿಂಡಿ
ಇಬತ್ತಿ ಉಂಡಿ.

೨

ಬಗಾಟ ಬಗರಿ
ತಿರುಗುವ ತಿಗರಿ
ತೆಂಗಿನ ಚವರಿ
ಗಾಳಿ ಸವಾರಿ
ಹಿತ್ತಲದಲ್ಲಿ
ಕುಂಬಳ ಬಳ್ಳಿ
ಅಂಗಳದಲ್ಲಿ
ಹೂ ಗಿಡಬಳ್ಳಿ
ಮುಂಗಡೆಯಲ್ಲಿ
ಬೇಲಿಯ ಕಳ್ಳಿ
ಬಳಿಯಲಿ ಸುಳಿದು
ಬೇಸರ ಕಳೆದು
ಪಾತರಗಿತ್ತಿ
ಪಕ್ಕಾಹತ್ತಿ
ಮೈಕೈ ತುಂಬ
ಹೂ ಮಕರಂದ
ಮಂಜಿನ ಹನಿಯ
ಮುತ್ತಿನ ತೆನಿಯ
ಹುಲ್ಲಿನ ವಸತಿ
ಕುಸುಮ ಕಸೂತಿ
ಕಾಮನ ಬಿಲ್ಲ
ಮೂಡಿಹುದಲ್ಲ!
ರೇಶಿಮೆ ಅಂಚ
ಮಿರಿ ಮಿರಿ ಮಿಂಚ

ಬಣ್ಣದ ಕುಂಚ
ಯಾರದು ಹೊಂಚ?
ಬಲಗೈ ತಾರ
ಎಡಗೈ ತಾರ
ಗಿರಿಗಿರಿ ಗಿಂಡಿ
ಇಬತ್ತಿ ಉಂಡಿ.

೩

ಕಂಬಕಂಬಾಟ
ನಿಂಬಿಯ ತೋಟ
ನವಿಲಿನ ಓಟ
ತಕಥೈ ಥಾಟ
ಗೆಳತಿಯರೆಲ್ಲ
ಬಂದಾರೇನ
ಮಲ್ಲಿಗೆ ಹೂವ
ಮುಡಿದಾರೇನ
ಗುಲಾಬಿ ಲಂಗ
ಉಟ್ಟಾರೇನ
ನೀಲಿ ಪೋಲಕ
ತೊಟ್ಟಾರೇನ
ನತ್ತು ಬುಗುಡಿ
ಇಟ್ಟಾರೇನ
ಚಿನ್ನದ ಬಳೆಗೆ
ಅತ್ತಾರೇನ?
ಬಾರೇ ಗೆಳತಿ

ನನ ಬಂಗಾರಿ
ವಸಂತಕಾಲದ
ಸಿರಿ ಸಿಂಗಾರಿ
ಮಾವಿನ ತಳಿರು
ಹುಣಿಸೆಯ ಚಿಗುರು
ಗಾಳಿಯ ಸುಳಿಗೆ
ಕುಣಿತದ ಕರೆಗೆ
ತಲೆಯನು ತೂಗಿ
ಮನಕಿಂಬಾಗಿ
ರವದೆಯ ಪೀಪಿ
ಊದುವದೇನ
ಹರುಷದ ಕೇಕಿ
ಹಾಕುವದೇನ?
ಗಿರಿಗಿರಿ ಗಿಂಡಿ
ಇಬತ್ತಿ ಉಂಡಿ.

೪

ನಗೆ ಮೊಗದಲ್ಲಿ
ಹರುಷದ ಬಳ್ಳಿ
ಕೋಮಲವೆನಿಸಿ
ರಾಗವ ರಚಿಸಿ
ತುಟಿಯಲಿ ಚಿಗುರಿ
ಗಲ್ಲದಲರಳಿ
ಕುರುಳಲಿ ಹೊರಳಿ
ಜಡೆಯಲಿ ತೂಗಿ

ಬಿಂಕದಿ ಬೀಗಿ
ನಿರಿ ಚೆಲ್ಲಾಟ
ಕೋಗಿಲೆ ಕುಕಿಲು
ತೆರೆಚಿನ್ನಾಟ;
ದಿನದಿನಕೊಂದು
ಹೊಸತನ ಬಂದು
ಸೆರಗನು ಹೊಚ್ಚಿ
ಕಣ್ಣೆವೆ ಮುಚ್ಚಿ
ತೆರೆ ತೆರೆವಂತೆ
ಚೆಲುವಿನ ಸಂತೆ!
ಕಣ್ಣಿನ ತುಂಬ
ಕನಸಿನ ಬಿಂಬ
ಜೀವದ ಗೆಳತಿ
ಒಲವಿನ ಒರತಿ
ಇತತ್ತ ಬಾರ
ಇದಿರಿಗೆ ಬಾರ
ಬಲಗೈ ತಾರ
ಎಡಗೈ ತಾರ
ಗಿರಿಗಿರಿ ಗಿಂಡಿ
ಇಬತ್ತಿ ಉಂಡಿ.

ಅಶ್ರುತಗಾನ

ಎಂದೊ ಗುಡುಗಿದ ಧ್ವನಿಯನಿಂದಿಗೂ ಹಿಡಿದಿಟ್ಟು
ಅಂಬರ ಮೃದಂಗವನು ನುಡಿಸಲೊಡರಿಸಿದಂತೆ
ಧಿಮಿಧಿಮಿಕು ಧುಮುಕು ತತ್ಥೊಂಗ ದುಂಧುಮ್ಮೆಂದು
ಬಾನತುಂಬೆಲ್ಲ ನಿಶ್ಶಬ್ದ ಶಬ್ದಾಂಬೋಧಿ ;
ಥಳಥಳಿಪ ಸೂರ್ಯಚಂದ್ರರು ತಾಳದೋಪಾದಿ!
ಗೆಜ್ಜೆಗೊಂಚಲು ಜಲಕ್ಕನೆ ಜಗುಳಿ ಸೂರೆಯಾ-
ದೊಲು ಪಳಚ್ಚನೆ ಮಿಂಚಿ ಚಿಕ್ಕೆ ನಡುನಡುಗುತಿರೆ
ಟಿಂವಕ್ಕಿ ಟೀಟಿಟಿಂವ್ ದಿಗ್ದಿಗಂತಕೆ ಹಬ್ಬಿ
ಎಲ್ಲೊ ಮರೆಯಾಗುತಿರೆ, ಕಂಕಣದ ಕಿಂಕಿಣೀ-
ಝುಂಕೃತವನೊಡವೆರಸಿ ಸಣ್ಣನೆಯ ಸೇವಿಗೆಯ
ಎಳೆಯ ಹೊಸೆ ಹೊಸೆದಂತೆ, ಬಿದಿರ ಮೆಳೆಯಲಿ
ಗಾಳಿ ಕೊಳಲ ಬಾರಿಸಿದಂತೆ ಹೃದ್ವೀಣೆಯಲಿ ಯಾರೊ
ಬೆರಳನಾಡಿಸುತಿಹರು! ಬೆಳದಿಂಗಳಲಿ ಕರಗಿ
ಒಗುಮಿಗುವ ತಮ್ಮ ಗಾನವ ತಾವೆ ಕುಡಿದಿಹರು.

ನೆನಹು - ನಲ್ಗನಸು

ಏಕೊ ಏಕಾಂತದಲಿ ಏಕಾಕಿಯಾಗಿರಲು
ಮೂಕ ಶೋಕದ ಚಿತ್ರ ಕಣ್ಣು ತಾಗಿ,
ಮನದ ನೀರವ ಬಾನ ನಡುವೆ ಬಣ್ಣದ ಮೋಡ
ಸುಳಿದು ನುಸುಳುವದಯ್ಯ ದೀನವಾಗಿ.

ನೆಲದ ಸುಂಟರಗಾಳಿ ತುಂಟತನದಲಿ ದಾಳಿ -
ಯಿಡಲು ಚದುರಿದ ಮೋಡ ದಿಕ್ಕುಪಾಲು!
ಒಳಗಣ್ಣತಿಳಿನೋಟ ಮಸಳಿ ಕಸವಿಸಿಗೊಳಲು
ಹೊರಗಣ್ಣನಂಚಿನಲಿ ಕಂಬನಿಗಳು.

ಜೇನು ಹನಿ ಹನಿಯಾಗಿ ಹರಿವುದೊಲವು
ನೆನಹಿನಲಿ ಜೀವನವು ಮಧುರತರವು;
ಮನವಿಮ್ಮಡಿಗೊಡು ರಂಜಿಪಂತೆ
ನೆನಹು ನಲ್ಗನಸಲ್ತೆ? ಅಂತೆ, ಉಂತೆ.

ಮಿಲನ

ಎರಡೆದೆಗಳು ತುಡಿಯುತ್ತಿವೆ ಪ್ರೇಮಾಂಬುಧಿಗೆಳಸಿ
ಆ ಗಂಗಾಯಮುನೆಯರೊಲು ಚಿರ ಸಂಗಮ ಬಯಸಿ.

ನಡುದಾರಿಗೆ ಅಡ್ಡೈಸಿದೆ ಗುಡುಗಾಡಿವೆ ಮುಗಿಲು
ಹೆಡೆಯೆತ್ತುತ ಫೂತ್ಕರಿಸಿದೆ ಬಿರುಗಾಳಿಯ ಹುಯಿಲು.

ನಿಡುಬಯಕೆಯ ಹಿಂದೂಡಿರೆ ಹರಿಗಡಿಸಿರೆ ಸೋಲು
ಗಿರಿದರಿಗಳು ಅಪ್ಪಳಿಸಿರೆ ತಿರುಗಣೆಯೊಲು ಹೊನಲು!

ಕಟ್ಟಳೆಗಳ ಕಟ್ಟೊಡೆಯುವೆ ಸ್ವಚ್ಛಂದದಿ ನಲಿವೆ -
ಎನ್ನುತ ಹಿರಿಯೊಲವಿನ ಝರಿ ಹರಿದಿರಲೇಗೈವೆ?

ಸವಿಯೊಲುಮೆಗೆ ರಂಗೆರಚಿದೆ ಬಾಂಬಿಲ್ಲಿನ ಬಣ್ಣ
ಮುಂಬಾಳಿಗೆ ಬಾಂಬಟ್ಟೆಯು ತೆರೆದಂತಿದೆ ಕಣ್ಣ!

ಬಾನವರನು ಬಿಟ್ಟೋಡುತ ಮಾನವರೆದೆ ಸೇರಿ
ವಿದ್ಯುನ್ನಟಿ ಇಳೆಗಿಳಿದಳೊ ಮಿಂಚಿನ ನಗೆ ಬೀರಿ!

ಹೆಣ್ಣಿನ ಕಣ್ಣಂಚಿನಲಿದೆ ಕಡೆಗಾಣದ ಆಶೆ
ಆ ಕಾಂತಿಯೆ ತಾರಾಪಥದೆಡೆಗೊಯ್ಯುವದೈಸೆ?

ಸವಿಸೊಲ್ಲಿಗೆ ನಗೆಮಲ್ಲಿಗೆ ಸಖಿ ಜೀವನ ಕಾಣ್ಕೆ
ರೋಮಾಂಚನ ಪಡೆದಂತಿದೆ ಹಸಿರುಟ್ಟಿಹ ನೆಲಕೆ!

ಪಂಜರದಲಿ ಅಗವಟ್ಟಿಹ ಗಿಳಿಗೆಲ್ಲಿದೆ ತ್ರಾಣ?
ಪಕ್ಕದಲಿಹ ರೆಕ್ಕೆಗಳಲಿ ಬಿಕ್ಕಳಿಸಿದೆ ಪ್ರಾಣ!

ಬಾನಾಡಿಯ ನುಣ್‍ಗೊರಲಿಗೆ ಗುಡಿಗಟ್ಟಿವೆ ದಿಕ್ಕು
ಎದೆ ಗೂಡಿನ ಗೆಡೆವಕ್ಕಿಗೆ ಬಹುದೆಂದಿಗೆ ಉಕ್ಕು?

ಓ ಎಂದಿಗೆ! ಇನ್ನೆಂದಿಗೆ ನೋಂತರ ಸಮ್ಮಿಲನ?
ಹೊಸಬಾಳಿನ ಹೊಸಹಾಡಿಗೆ ರಸಮಯ ಸಂಸ್ಕರಣ?

ನಲ್ಮೆ

"ನಿನ್ನೆದೆಯ ಜೇನ ನೀಡುವ ನಲ್ಮೆಯಿಂದೆನ್ನ
ಒಲಿಸಿ ಮೀಸಲು ನಗೆಯ ಸೂಸಿ ಕರೆದೆ;
ಇಂದೇಕೆ ಮೊಗಬಾಡಿ ವಿಹ್ವಲ ವಿಕಾರದಲಿ
ನಿಂದಿರುವೆ ಚೆಂದುಳ್ಳ ಮಧುರ ಹೂವೆ?"

"ಬೇರೊಂದು ದುರುದುಂಬಿ ಕೆಟ್ಟಗಾಳಿಯ ಸುಳಿಗೆ
ಬಂದೆನ್ನ ಬಲುಮೆಯಲಿ ಬಲಿಗೊಂಡಿತು;
ಅಯ್ಯೊ ಆ ವಿಷನಿಮಿಷ! ಮೈಯೆಲ್ಲ ಉರಿಯುತಿದೆ
ಅಬಲೆಯೆಂದೆನೆ - ಸಾವು ಬೇಕಾಯಿತು!"

ತುಂಬಿ ಮೊರೆಯಿತು ಮರೆಯಲಾರೆನೆಂದು
ನೊಂದ ಹೂ ಕಳಚಿತ್ತು ಎದೆಯು ಬೆಂದು;
ಗಾಳಿ ಗೋಳಿಡೆ ಹಾಡೆ ಚರಮಗೀತ
ಮುಗಿಲ ಹೆಗಲೇರಿ ಸಾಗಿತ್ತು ಪ್ರೇತ!

ನವೋದಯ

ಮೂಡಣದ ಕೋಡಿಯೊಡೆಯಿತು, ಬೆಳಕು ಹರಿಯಿತಿಗೊ
ದೈವ ತೆರೆಯಿತು ಜಗದ ಜನದ ಮನದ !
ಉಷೆಯು ತಲೆಬಾಚಿ ನಸುನಾಚಿ ಕೆಂಪೇರಿಹಳು
ಬಣ್ಣನೆಗೆ ಬಾರದಿದೆ ಮೊಗದ ಬಿನದ
ವಿಶ್ವವೀಣಾವಾಣಿ ಹಕ್ಕಿ ನಿನದ!

ಆದುದಾಯಿತು ಹಿಂದು, ಶುಭ ನವೋದಯವಿಂದು
ಕಾರಿರುಳ ಕುರುಡಿಂಗೆ ಕಣ್ಣು ಬಂತು!
ಅರುಣನುದಯಕೆ ಕರುಣೆ ಕೊನರಿ ದಾಂಗುಡಿಯಿಟ್ಟು
ಹೂವಿನಲಿ ದೈವಿಕತೆ ಕರುವಿಟ್ಟಿತು!
ಜೀವದೇವರ ಮಿಲನ ಝೇಂಕರಿಸಿತು!

ಎದೆಯ ಮೆಲ್ಪಾಸಿನಲಿ ಕಲ್ಪನೆಯ ತಲ್ಪದಲಿ
ನಿದ್ರೆಗೈದಿಹ ನನ್ನ ಮುದ್ದು ಹಕ್ಕಿ!
ಅಗಲಿ ಕೂಡುವ ಸುಖವ ನೆಚ್ಚಿ ಹಾರಿಸಿದೆನಿದೊ
ನೀಲದಲಿ ತೇಲಾಡು ಪ್ರಾಣಪಕ್ಷಿ!
ಪ್ರೇಮದೌದಾರ್ಯವಿದು, ಆತ್ಮಸಾಕ್ಷಿ.

ಒಂದು ಪುಟ್ಟ ಹಕ್ಕಿಗೆ

೧

ಚಿಟ್ಟ ಗುಬ್ಬಿ ಪುಟ್ಟ ಗುಬ್ಬಿ
ಮುಳ್ಳು ಬೇಲಿಯನ್ನು ತಬ್ಬಿ
ಚೀರಿ ಚೀರಿ ಗಂಟಲುಬ್ಬಿ -
ಒಡೆಯುವಂತೆ ಹಾಡಿತು;

ಕೇಳಲಿಲ್ಲ ಜಗದ ಕಿವಿ
ನೋಡಲಿಲ್ಲ ಬಾನರವಿ
ನೀನಾದರು ಬಾರೊ ಕವಿ
ಎಂದು ಅಂಗಲಾಚಿತು;

ಹಗಲುದಿಗಿಲುಗೊಳಿಸುತಿರಲಿ
ಸುಗ್ಗಿ ಹೋಗಿ ಮಾಗಿ ಬರಲಿ
'ಟಿವ್ವೂ ಟಿವ್ವೂ' ಎಂದು ಒರಲಿ
ಕೊರಗಿ ಸಣ್ಣಗಾಯಿತು;

ತೆನೆಯ ಹಾಲುಗಾಳನುಳಿದು
ಗಗನ ಗಮನವನ್ನು ಹಳಿದು
ಗೂಡಿನಲ್ಲಿ ಮೌನ ತಳೆದು
ರೆಕ್ಕೆ ಮುದುರಿ ಕುಳಿತಿತು.

ಏಕೆ ಇಂತು ಉದಾಸೀನ
(ಸದಾಶಿವನಿಗದೇ ಧ್ಯಾನ)
ನಿನ್ನ ಬಾಳಿಗಾವ ಊನ
ಹೇಳು ಪುಟ್ಟ ಹಕ್ಕಿಯೆ?

ಜಗವಪಾರನಾದಧುನಿ
ನಿನ್ನ ಧ್ವನಿಯದೊಂದು ಹನಿ
ಅದನೆ ಹಾಡಿ ಹಾಡಿ ತಣಿ
ವಿಶ್ವವೀಣೆ ತಂತಿಯೆ.

ಜನತೆಯೊಂದು ಮೂಢಸಂತೆ
ಕಲಹ ಕಪಟ ಕಂತೆ ಕಂತೆ
ನಿನಗೇತಕೆ ಅದರ ಚಿಂತೆ
ಮುನ್ನಿನಂತೆ ನೀನಿರು;

ಬೆಳಕಿನೆಡೆಗೆ ಕಣ್ಣತೆರೆ
ಜಗವ ಕಾವನೊಬ್ಬ ದೊರೆ
ಒಪ್ಪಿಸವನಿಗೆಲ್ಲ ಹೊರೆ
ನಿನ್ನಷ್ಟಕೆ ಹಾಡಿರು.

ಮತ್ತೊಂದು ಪುಟ್ಟ ಹಕ್ಕಿಗೆ

ಎಲ್ಲಿಂದ ಬಂದೆ ನೀ ನನ್ನ ಮುದ್ದಿನ ಹಕ್ಕಿ?
ಹದುಳವೆನ್ನುವಮೊದಲೆ ಹಾರಬೇಡ;
ಒಂದು ಚಣವಾದರೂ ನನ್ನ ಬಳಿಯಲಿ ಕುಳಿತು
ಕುಶಲವಾರ್ತೆಯ ನಾಲ್ಕು ಮಾತನಾಡ.

ಎಂದಾದರೊಂದು ದಿನ ಅಂದಚಂದಕೆ ಬರುವೆ
ನೋಡನೋಡುತ ಪಕ್ಕ ಬೀಸಿ ಬಿಡುವೆ;
ನನ್ನ ಹೃದಯದ ಮಾತು ಹೃದಯದಲ್ಲಿಯೆ ಉಳಿಯೆ-
ಒಲವು ನಲವಿಗೆ ಸಂಚಕಾರ ಕೊಡುವೆ.

ನಿನ್ನ ಹಾಡಿನ ಮುಂದೆ ನನ್ನದೇತರ ಪಾಡು-
ನನ್ನ ಹಾಡಿಗು ನನಗು ಜನ್ಮಗಂಟು!
ನೀ ಕಂಡ ಬನದಲ್ಲಿ ಬಾನಿನಲಿ ಕಾನಿನಲಿ
ಇವಕು ಮೀರಿದ ಬೇರೆ ಭಾವವುಂಟು.

ನಿನ್ನ ಧ್ವನಿ ಸ್ವಚ್ಛಂದ ಆನಂದದುಕ್ಕಂದ
ಹೊಚ್ಚ ಹೊಸ ಮಳೆಯ ತನಿಸೆಳಕಿನಂತೆ;
ಹಚ್ಚ ಹಸುರಿನ ಬನದಿ ಗಿರಿಶಿಖರದಿಂದುರುಳಿ
ಹರಿವ ನದಿಯಲಿ ನಾದ ತುಳುಕಿದಂತೆ.

ಪುಟ್ಟ ಹಕ್ಕಿಯ ಇಂಥ ಪುಟ್ಟ ಎದೆಯೊಳದೆಂತು
ಗಾನಚಿಲುಮೆಯು ತಾನೆ ಚಿಮ್ಮುತಿಹುದೊ!
ಇಳೆಯ ಬಾಳಿನ ಸಾರಸರ್ವಸ್ವಸುಧೆಯೆಲ್ಲ
ಹಕ್ಕಿಕಂಠದೊಳಿಂತು ಹೊಮ್ಮುತಿಹುದೊ!

ಮೇಲೆ ನೀಲಾಂಬರದಿ ಮೋಡ ತೂಕಡಿಸುತಿವೆ
ನಿನ್ನ ಗಾಯನ ಸುರಾಪಾನದಲ್ಲಿ
ನಿನ್ನ ಧ್ವನಿ 'ಗೋ' ಯೆಂದು 'ಆ' ಯೆಂದು 'ಬಾ'ಯೆಂದು
ದಿಕ್ಕು ಕರೆ ಕರೆದಿಹವು ತಮ್ಮೊಳಲ್ಲಿ!

ಮರದುದಿಗೆ ಹೊಂಬಿಸಲ ಬಾವುಟವು ತೂಗಿಹುದು -
ಸೃಷ್ಟಿ ತಲೆದೂಗಿರಲು ಹೆಚ್ಚಿಗೇಕೆ?
ನನ್ನೆದೆಯ ಮೌನದಲಿ ಕರಗಿ ನೀರಾಗಿರಲು
ಆರಿಗಾರೋ ಎಂದು ಹಾರಲೇಕೆ?

ಏನಾದರೂ ಇರಲಿ ಹಾಡ ನಿಲ್ಲಿಸಬೇಡ:
ದೀಪ ಪಟ್ಟನೆ ಆರಿ ಹೋಗಬಹುದು!
ನನ್ನೆದೆಯ ಕತ್ತಲೆಯ ಕಣ್ಣುಕಪ್ಪಡಿ ಮತ್ತೆ
ಮೂಲೆ ಮೂಲೆಗೆ ಹೋಗಿ ಹಾಯಬಹುದು!

ಬದುಕು ಸೋಲಾದರೂ ಕಾಡು ಪಾಲಾದರೂ
ಹಾಡ ಬಿಟ್ಟುಳಿದವನ ಪಾಡುಬೇಡ;
ನೀನೆನ್ನ ದೈವತವು ಹಾಡೆನ್ನಜೀವಿತವು
ಮತ್ತೆ ಮತ್ತುಳಿದವರ ಮಾತುಬೇಡ.

ಸ್ವರ್ಣಪಕ್ಷಿ

ಬ್ರಹ್ಮಾಂಡದ ಬಿರುಮೊಟ್ಟೆಯನೊಡೆದು
ಪಿಂಡಾಂಡದ ತನಿಗೆಂಡವ ಪಡೆದು
ಇರುಳಿನ ಕಬ್ಬಿಣ ಪಂಜರ ಮುರಿದು
ಹಾರಿತು ಸ್ವರ್ಣಾರುಣ ಪಕ್ಷಿ!
ಮೂಡಣ ಬಾನಿನ ಉಷೆ ಸಾಕ್ಷಿ!

ಮೇಘಮಂಡಲದ ಬಾಗಿಲ ತೆರೆದು
ಜಗದಗಲವ ಮುಗಿಲಗಲವನಲೆದು
ತಾರಾಲೋಕದ ಕಣ್ಣನು ಸೆಳೆದು
ಸಾರಿತು ಸ್ವರ್ಗ ಸಮೀಪದಲಿ!
ಚೀರಿತು ಮಾಯಾ ಲೋಕದಲಿ.

ಏನಾಯಿತು ಏಕಾಯಿತು ಎಂದು
ಅಸಮಾಧಾನಕೆ ಪೂರವು ಬಂದು
ಜಗದ ಕಣ್ಣಿನಲಿ ಕಂಬನಿ ನಿಂದು
ಹುಡುಕಿರೆ ಬೆಳ್ಳಂಬೆಳಕಿನಲಿ
ಬಾನಿಗೆ ಬಾನೇ ಬೆರಗಿನಲಿ -

ಹೃದಯ ಸಮುದ್ರವ ತೊತ್ತಳದುಳಿದು
ಯಾ ಸೌಭಾಗ್ಯಕೊ ಯಾರೋ ಕಡೆದು
ವಿಷವನು ಕಡೆಯಲಿ ನೀನೇ ಕುಡಿದು
ನಿಂತಿಹೆ ಮಾನವ ಕೋಟಿಯಲಿ!
(ಹಾಡಿತೆ ಹಕ್ಕಿಯು ವ್ಯಂಗ್ಯದಲಿ?)

ಹಗಲುರುಳಿತು ಇರುಳಾಯಿತು, ಮರೆತೆ;
ಪಡುವಣ ಬಾನೊಳಗೇತರ ಕೊರತೆ?
ತುಂಬಿ ತುಳುಕೆ ಸುರಗಾನದ ಒರತೆ
    ಇಳಿಯಿತಗೋ ಹೊಂಬಣ್ಣದ ಪಕ್ಷಿ
    ಸಂಧ್ಯಾಸುಂದರಿ ಹಿರಿಸಾಕ್ಷಿ!

ರಸಋಷಿ

೧

ಆಹ! ಮಧುಮಾಸವೈತಂದಿಹುದು. ಬನಕೆಲ್ಲ
ಚಿಗುರು ಹೂಗಳ ಹುಚ್ಚು ಹಿಡಿದಿಹುದು. ಜೀವನದ
ರಸಿಕತೆಯೆ ಮೂರ್ತಿಮತ್ತಾಯಿತೆನೆ ಆ ಮರದ
ತಳಿರ ತಣ್ಣೆಳಲಲ್ಲಿ ಮುಪ್ಪಾದ - ಅಲ್ಲಲ್ಲ -
ಹರೆಯ ಒಪ್ಪಂಬೂಸಿ ಕಪ್ಪು ಕಾಣಿಕೆಯಿತ್ತ
ಉಮರ ಖಯ್ಯಾಮನದೊ ನಲ್ಗಬ್ಬಮಂ ಪಿಡಿದು
ಕುಳಿತಿರುವನಾನಂದಿ! ಬಟ್ಟಲದ ತುಂಬ ಮಧು
ಚೆಂಗುಲಾಬಿಯ ಚೆಲುವೆ ಸಾಕಿ ರಾಗೋನ್ಮತ್ತ
ಚಿತ್ತ ಚಿತ್ರೀಭೂತೆ ಸಂಗೀತವೆರೆದಿಹಳು!
ಚೆಲ್ವ ಬುಲ್ ಬುಲ್ ಪಕ್ಷಿ ಜೊತೆಗೆ ಸರವೆತ್ತಿಹುದು;
ಕಾಡು ನಾಡುಗಳೆಂಬ ಪರಿಭೇದವಳಿದಿಹುದು.
ಏನಿದೇನಗ್ಗಳಮೊ! ಒಲವರದ ರಸಬಾಳು.
ಎಣ್ದೆಸೆಗು ತಂಗಾಳಿ ಸಂದೇಶ ಬೀರುತಿದೆ:
"ಪ್ರೇಮಜೀವಿಯು ಚಿರಂಜೀವಿ ಕೇಳ್ ಮುಗುದೆ".

೨

ಸಾಕು ಮಾಡೀಜನ್ಮವೆಂದು ನರಳುವದೇಕೆ?
ಸಾವಿನಂಜಿಕೆಯೇಕೆ? ನಮ್ಮ ಪಾಲಿನ ಬದುಕು
ಮಧುವಾಟಿಕೆಯ ಸರಕು; ಚಿಂತೆ ನಾಳೆಗೆ ಹೋಕು.
ಇಂದಿಗಿದೆ ಸುಮುಹೂರ್ತ ಬರಲಿ ಹರುಷದ ಕೇಕೆ
ಅವರಿವರಿಗಂಜಿ ಸುಖಪಡಲು ನಾಚುವರೊಳರೆ?

ನಮ್ಮ ಬಾಳಿಗೆ ನಾವು ಹೊರೆಯಲ್ಲ; ಹೂವಿನೊಲು
ಹಗುರು; ಸುಖನಿಮಿಷ ಸವಿದ್ರಾಕ್ಷಿ ಪಾನಕದಮಲು
ಬಾಳಗೋಳನು ಮರೆಸಿ ಹಿಗ್ಗಿನಲಿ ಸುಗ್ಗಿಬರೆ
ತಡಮಾಡದಿರು ಏಳು ಏಳೆನ್ನ ಮನದನ್ನೆ
ಸಂಕಷ್ಟವೀಡಾಡಿ ಪ್ರೇಮಮಧುನಿಧುವನದಿ
ಒಂದೆ ಸಲ ಅರೆವಿರಿದ ನಿನ್ನಧರ ಚುಂಬನದಿ
ಅಮರನಾಗುವನುಮರ; ಸತ್ಯಮಿದು ಓ ಚೆನ್ನೆ
ನಿನ್ನ ಹೂಗೆನ್ನೆಯಲಿ ನನಗಿಂದ್ರಸಂಪದಂ
ಚೆಲುವಿನೊಲವಿನ ಭೋಗ ದೈವಪ್ರಸಾದಂ.

೩

ಉಮರನೊಸಗೆಯ ಕೇಳಿ ಹಿಗ್ಗಿ ಹಾಡಿತು ಜೀವ
ಕೇಕೆ ಹಾಕಿತು ನವಿಲು, ಫಲಮಂಜರಿಯ ಕರ್ದುಕಿ
ರಸವನೀಂಟಿತು ಗಿಳಿಯು. ತಳಿರಜೊಂಪನು ತುಡುಕಿ
ಬಗ್ಗಿಸಿತು ಕೋಗಿಲೆಯು. ಎಳಗರುಕೆಯನು ಮೇವ
ಹರಿಣಿ ನೆಗೆಯಿತು ಬಾನ್ಗೆ! ತುಂಬು ಚಂದಿರನೆದೆಯು
ತಂಬೆಳಕ ತುಳುಕಿಸಿತು. ತುಂಬಿ ಝೇಂಕಾರದಲಿ
ಬಳ್ಳಿ ಮಾಡದೊಳಲೆಯೆ ಪರಿಮಳದ ಗಾಳಿಯಲಿ
ಪನ್ನೀರ ಚಿಮುಕಿಸಿತು ಮೋಡ ಹಾಲಿನ ಕೆನೆಯು.
"ಜೀವನದ ಸೊದೆಯ ಸವಿಯಲ್ಕಿರುವುದೀ ನಿಮಿಷ
ಕರೆವುದಿನ್ನೊಂದು ನಿಮಿಷದಲಿ ಸುಡುಗಾಡು"
ಹೊತ್ತು ಹೋದರೆ ಮತ್ತೆ ಕಾದು ಕುಳಿತಿದೆ ಕೇಡು
ವೇದಾಂತ ಜಡವಾದಿ, ಓ ಸನಾತನಿ ಕಲುಷ
ವಾದವನು ಹೂಡದಿರು; ರಸಋಷಿಯ ತತ್ವಮಿದು
ಅವನ ಬಾಳಿನ ಲಸತ್ಕಾವ್ಯಕುಂಜರಿ - ಮಧು.

ನನ್ನೊಲವು

ಹುಲ್ಲು ಗದ್ದೆಯ ಹೂವು ನೆಲದೆದೆಯನಪ್ಪಿದೊಲು
ಅನಿತು ನನ್ನೆದೆ ಸನಿಹಕಿರುವಳವಳು;
ದಣಿದ ಅವಯುವಗಳಿಗೆ ನಿದ್ದೆ ಮುದ್ದಾದಂತೆ
ನನಗಿನಿತು ಸವಿಯಾಗಿ ತೋರಿದವಳು.

ತನಿ ಶರತ್ಕಾಲದಲಿ ಅರ್ಪಣಾನಂದದಲಿ
ನದಿ ಮಹಾಪೂರದಿಂದೋಡುವಂತೆ
ತುಂಬಿ ಹರಿಯುವ ನನ್ನ ಬಾಳು; ಅವಳಲ್ಲಿರುವ
ಪ್ರೇಮಬಾಹುಳ್ಯವನೆ ಸಾರ್ವುದಂತೆ!

ತೊರೆಯ ಮರ್ಮರ ಝರಿಯ ತೆರೆಯ ಮೇಳಾಪದಲಿ
ಸಾಮರಸ್ಯದ ಸಾಮಗಾನದಲ್ಲಿ
ಹಾಡುವೊಲು ನನ್ನ ಹಾಡುಗಳೆಲ್ಲ ವಿಕಲಯ-
ವಾಗಿಹವು ನನ್ನೊಲವಿನಾಳದಲ್ಲಿ.

"Lover's Gift"- 4.

– ಗೆ.

೧

ಒಲವು ಬೆಸುಗೆಗೊಂಡ ಒಸಗೆ -
ಗಾವ ಹಾಡು ಹಾಡಲಿ?
ಹೇಳು ಕೆಳದಿ ನಿನ್ನ ಚೆಲುವಿ -
ಗಾವ ನುಡಿಯ ತೊಡಿಸಲಿ.
ನನ್ನ ಹೊನ್ನ ಕನಸು ನಿನ್ನ
ರೂಹುವಡೆದು ಬಳಿಯಲಿ
ಕುಳಿತು ನಲಿಯುತಿರಲು ಮುಗುದೆ
ಹೆಚ್ಚಿಗೇನು ಬೇಡಲಿ?

೨

ನಿನ್ನ ಕಂಡ ಚಣದೊಳೆನ್ನ
ಕಂಗಳ ಬರ ಹಿಂಗಿತು;
ನೂರು ನೋವನೆಲ್ಲ ಮರೆಸಿ
ಸ್ವರ್ಗ ಹೂವ ಸುರಿಸಿತು;
ಸುಳಿವ ಗಾಳಿ ಅಳಿಯದಂಥ
ಪ್ರೀತಿಗಂಧ ತಂದಿತು,
ಜೀವ ಬಯಸಿದಂಥ ಜೇನಿ-
ನಲ್ಲಿ ಆತ್ಮ ಮಿಂದಿತು.
ನಾದಲಹರಿಯೊಡನೆ ಬಂದ
ನೀನು ಹಾಡಿನೊಡತಿಯು
ಒಲಿದು ಒಲಿಸಿಕೊಂಬ ನಗೆಯೆ
ನಿನ್ನ ನಯದ ನಡತೆಯು.

ಮಾತು ಪಾರಿಜಾತ ಪುಷ್ಪ -
ದಂತೆ ಮೃದುಲ ಕೋಮಲ
ಹದುಳದಿಂದ ಒಡಪಿನಂದ
ಪಡೆದ ಭಾವನೋಜ್ವಲ!

೪

ಒಲವು ಬಳ್ಳಿಯಾಗಿ ಕುಡಿಯ
ಚಾಚಿ ನಿನ್ನ ಬಳಸಿದೆ,
ನಡುವೆ ಚೆಂಗುಲಾಬಿಯಂತೆ
ನಿನ್ನ ಬಾಳು ಅರಳಿದೆ;
ಸುಪ್ರಭಾತದಲ್ಲಿ ನಭದಿ
ಉಷಾರೂಪದರ್ಶಿನಿ!
ಇಂದು ನನ್ನ ಜೊತೆಗೆ ಬಂದೆ
ಶುಭದ ಪ್ರೇಮಕಾಂಕ್ಷಿಣಿ.

೫

ಗಾಳಿಸುಳಿಗೆ ತಿರ್ರನೆಂದು
ತಿರಿವ ಗರಿಯ ತೆರದಲಿ
ಹರಿದ ತಂತಿ ನುಡಿಸಿದಂತೆ
ತೀರ ನವೆದ ಸರದಲಿ
ತಿರುಗುತಿತ್ತು ಮರುಗುತಿತ್ತು
ನನ್ನ ಚಿತ್ತರಂಗವು;
ಇಂದು ನಾದಾದುನ್ಮಾದದಿ
ಝೇಂಕರಿಸುವ ಭೃಂಗವು.

೬

ಕೂರ್ಮೆ ಕುರುಹನರುಹುತಿಹುದು
ಚೊಕ್ಕ ಚಿನ್ನದುಂಗುರ
ಮಧುಮಾಸದ ಚಂದ್ರಹಾಸ
ಬೆಳಗಿತೆದೆಯ ಮಂದಿರ.
ಮುಗಿಲ ಮಾಡದಲ್ಲಿ ಮಿಗಿಲು
ಚಿಕ್ಕೆ ಎತ್ತಲಾರತಿ
ಒಲುಮೆಯೋರೆನೋಟದಲ್ಲಿ
ತಣಿಸುತಿಹಳು ಈ ರತಿ.

೭

ನಮ್ಮ ಕಂಡು ಸೂರ್ಯಚಂದ್ರ -
ರೆಂಥ ನಗೆಯ ನಕ್ಕರು!
ಹೊನ್ನ ಜೊನ್ನ ಕಿರಣದಲ್ಲಿ
ಶಾಂತಿ ಸವಿಯನಿತ್ತರು.
ಬಂದ ಮಾವು ಬಿಟ್ಟ ತಳಿರ
ತಳ್ಕೆಯಲಿ ಕೋಗಿಲೆ
ಮಧುರ ಪ್ರೇಮಗೀತ ಪಾಡೆ
ಎದೆಗೆ ಇನಿಯಳುಯ್ಯಲೆ!

೮

ಅಚ್ಚ ಬಾಳಿನಚ್ಚುಮೆಚ್ಚು
ಪಡೆದು ಬಂದ ಚಂದಕೆ
ಅರಿತು ಬೆರೆತ ಸೌಧರ್ಮಿಕೆ
ಒಂದಕೊಂದು ಹೊಂದಿಕೆ.

ನಲ್ಲೆ ನಿನ್ನ ನೆಚ್ಚಿ ಮೆಚ್ಚಿ
ಹಾಡಿದಷ್ಟು ಸುಂದರ
ನಲ್ಮೆಗೈಯು ಹರಸುತಿರಲು
ಬಾಳು ಹಸುರ ಹಂದರ.

೬

ಒಲವು ಬೆಸುಗೆಗೊಂಡ ಒಸಗೆ -
ಗಾವ ಹಾಡು ಹಾಡಲಿ?
ಹೇಳು ಕೆಳದಿ, ಹೊಸತು ಬಾಳು
ಹರುಷದಿಂದ ಹಿಗ್ಗಲಿ.
ಮುಂದೆ ಬಹುದ ಕಂಡರಾರು
ಇಂದು ಜೀವ ಕುಣಿಯಲಿ
ಪ್ರೀತಿಯೊಂದೆ ನಮ್ಮ ನೀತಿ
ಅದರೊಳೆದೆಯು ತಣಿಯಲಿ.

ನನ್ನ ಹೊಂದಾವರೆ

ನನ್ನ ಕನಸಿನ ಹೊನ್ನ ತಾವರೆಯ ಹೂವರಳಿ
ಎನ್ನ ಬೊಗಸೆಯೊಳಿಂದು ಕಂಗೊಳಿಸಿದೆ;
ಎನ್ನಿನಿಯ ಭಾವಗಳ ಮಧುರ ಮಕರಂದವೂ
ಮೃದುಲ ದಲದಲಗಳಲಿ ಪರಿಮಳಿಸಿದೆ!

ಮಾನಸ ಸರೋವರದ ಶಾಂತಿ ಸೌಖ್ಯಾಭೋಗ
ಸಕಲ ಸೌಂದರ್ಯದೀ ಮೊಗ್ಗೆಯಾಗಿ
ನೇಹ ನೇಸರನೊಂದು ಮೀಸಲದ ಕಿರಣದೆಡೆ
ಮೊಗವ ಚಾಚಿದೆ ಸೊಗಕೆ ಕಳಸವಾಗಿ.

ಹಲವಾರು ಹೂವುಗಳ ಅಂದಚಂದವದಿರಲಿ
ಸೌಗಂಧವೇ ಇದರ ಸೌಭಾಗ್ಯವು,
ಕಂಡ ಕಣ್ಣಿಗೆ ತಂಪು ಎದೆಗೆ ಕುಂದದಲಂಪು-
ನಕ್ಷತ್ರಗಂಗಳಕ್ಷಯದ ಒಲವು!

ಎದೆಗೆದೆಯ ತುಂಬಿಸುವ ರಂಬಿಸುವ ಝೇಂಕಾರ -
ಹಲವು ಹಂಬಲವಿಲ್ಲಿ ಹಣ್ಣಾಗಿವೆ;
ಬಿಸಿಲೊ ಬೆಳುದಿಂಗಳವು, ಕಾಡೊ ನಂದನವನವು
ಮಧುರ ಮಿಲನದೊಳೆಲ್ಲ ಜೇನಾಗಿವೆ.

ಆವ ಚೆಲುವಿನ ದಿವ್ಯ ಸಾನ್ನಿಧ್ಯವನು ಬಯಸಿ
ಜೀವವನವರತವೂ ಹುಡುಕುತಿತ್ತೊ -
ಸತ್ಯ ಸೌಂದರ್ಯಗಳ ಹತ್ತು - ಗಡಿಯನು ತಡಕಿ
ಅಂತರಂಗದೊಳಿಂತು ಮಿಡುಕುತಿತ್ತೊ

ಅಂಥ ಪಂಥದ ಮುದ್ದು ಮೊಗವನಪ್ಪಿತು ಗೆಲವು
ಬಾಳಬೀದಿಗೆ ಬೆಳಕು ನುಗ್ಗಿ ಬಂತು!
ಹೊಂಗೆಳತಿ ಸಂಗಾತಿ ಪ್ರೇಮಕುಂಡಜ್ಯೋತಿ
ನಿನ್ನ ಜೊತೆಯೊಳು ಬಾಳು ತುಂಬಿ ಬಂತು.

ನಲುಮೆಯ ಕರೆ

ಅಲ್ಲೆ ಇರು, ಇಲ್ಲೆ ಇರು, ಎಲ್ಲೊ ಎಂತಾದರಿರು
ನನ್ನ ನಲುಮೆಯ ಕರೆಗೆ ಓಗೊಡುತಿರು;
ಒಮ್ಮೆ ಉದ್ವೇಗದಲಿ, ಒಮ್ಮೆ ಸಂತೃಪ್ತಿಯಲಿ
'ಓ' ಎಂಬ ಸವಿದನಿಯ ಸೋಂಕಿಸುತಿರು.
ದೂರದಿಂ ತೇನೆಯುಲಿ ಸಾರುವಂತೆ
ಮರಳಿ ಬೆಳುದಿಂಗಳಲಿ ಕರಗುವಂತೆ!

ಆವ ಹೆಸರಿನ ಅಂದಚಂದದಲಿ ಎನಿತುಸಲ
ಮೆಚ್ಚಿ ಕರೆದರು ಮನಕೆ ತೃಪ್ತಿಯಿಲ್ಲ;
ಹೂವಿನೆದೆ ಸವಿಜೇನಿಗಾವ ಹೆಸರಿಟ್ಟರೂ
ತುಂಬಿ ತಣಿ ಹೀರದೆಯೆ ಮಾಬುದಿಲ್ಲ.
ಒಲುಮೆಯಾಳದ ನುಡಿಯು ಹೃದಯಂಗಮ
ಬದುಕ ಸವಿಯಾಗಿಸುವ ರಸಸಂಭ್ರಮ.

ತಿಳಿಗೊಳದ ಮಧ್ಯದಲಿ ತೆರೆಯ ವರ್ತುಲಗಳಲಿ
ಹೊನ್ನ ತಾವರೆ ತೇರು ತೇಲಿದಂತೆ
ಮನದ ಮಾನಸ ಸರೋವರದ ಕನ್ನಡಿಯಲ್ಲಿ
ನಿನ್ನ ಮೊಗ ಚಂದಿರನ ಬಿಂಬದಂತೆ!
ಬಾಳ ನಿರ್ಮಲಗೊಳಿಸಿ ಸಿಂಗರಿಸಿದೆ.
ಎದೆಯ ಮಂದಿರ ಮತ್ತೆ ಕಂಗೊಳಿಸಿದೆ.

ಸುಂದರ ವಸುಂಧರೆಯು ಸೂರ್ಯಚಂದ್ರಾದಿಗಳು
ಕೋಟಿ ನಕ್ಷತ್ರಗಣ ನೀಹಾರಿಕೆ
ಯಾರ ದೂರದ ಕರೆಗೊ ಓಗೊಟ್ಟು ಓರಂತೆ
ತಿರುಗುತಿವೆ ಒಂದೊಂದರೊಳಸೆಳೆತಕೆ.
ಸುಖದುಃಖಗಳ ಸಾಮರಸ್ಯದಲ್ಲಿ
ಬಾಳಿಹುದು ಮನುಜಕುಲ ಸಖ್ಯದಲ್ಲಿ.

ಸೊಂಪೇರಿ ನಳನಳಿಸಿ ಬೆಳೆದ ಪೈರಿನ ಕಂಪು
ಗಾಳಿಯಲಿ ತಂಪಾಗಿ ಬೀಸುವಂತೆ
ನೂರು ಗಾವುದ ದಾಟಿ ಮೇಘತಾನವ ಮೀಟಿ
ಇನಿವಾತನುಸುರುತಿರು ಹಿಂಗದಂತೆ.
ಯಕ್ಷ ಸಾಕ್ಷಿಗೆ ಮೇಘದೂತನಾಗೆ
ಇಂದು ಕಳಿಸಿಹನಕ್ಷಿ ಪಕ್ಷಿಹಾಗೆ.

ಜೊತೆ

ಬಾನಂಗಣದಲಿ ಕಂಕಣ ಕಟ್ಟಿದೆ
ಚಂದಿರ ರೋಹಿಣಿಯರ ಬಳಸಿ,
ಕಿರುಮೋಡವು ಹೆಡೆಯಾಡಿಸಿ ನಲಿದಿದೆ
ಗಾಳಿಯ ಪುಂಗಿಯನನುಸರಿಸಿ.

ಅಲ್ಲಿಂದಿಲ್ಲಿಗೆ ಸಾವಿರ ಮಲ್ಲಿಗೆ-
ಚಿಕ್ಕೆಯ ಸೇತುವೆ ತೂಗಿಹುದು,
ಇರುಳಿನ ಹೆಜ್ಜೆಯ ಗೆಜ್ಜೆಯ ಮೆಲ್ಲುಲಿ
ಗಿರಿವನ ಕೊಳದಲಿ ಸುಳಿದಿಹುದು.

ಹಿತಮಿತವಾಗಿಹ ಮಾಯಾಬಂಧನ
ಸೃಷ್ಟಿರಹಸ್ಯದ ಛಾಯೆಯಿದು -
ಮಾತಿಗೆ ನಿಲುಕದ ರಸಸಂವೇದನ
ಅತ್ತಿಂದತ್ತವ ವಿವರಿಸದು.

ಈ ಬೆಳುದಿಂಗಳ ಇಂಗಡಲಾಳದಿ
ಕಂಗಳ ಮೀನ್ಗಳ ತೆರೆಯೆ ಸಖಿ,
ಸೃಷ್ಟಿಯ ಸೌಂದರ್ಯೋಪಾಸನೆಯಲಿ
ನೀ ಜೊತೆಗಿರೆ ನಾ ಪರಮಸುಖಿ

ಜೀವಜೀವಾಳದಲಿ ಕೂಡಿದವಳು

೧

ಸಣ್ಣ ಮನೆಯನು ತುಂಬಿ
ನುಣ್ಣಗಿನ ದನಿಯಲ್ಲಿ
ಬಣ್ಣವೇರಿದ ಹೆಣ್ಣು ಹಾಡುತಿಹಳು.
ಕೈತುಂಬ ಹಸಿರು ಬಳೆ
ಹಣೆಗೆ ಕುಂಕುಮ ಚಂದ್ರ
ಜಡೆತುಂಬ ಮಲ್ಲಿಗೆಯ ಮುಡಿದಿರುವಳು.

೨

ಹೆಜ್ಜೆ ಹೆಜ್ಜೆಗಳಲ್ಲಿ
ನವಿಲನಾಡಿಸುತಿಹಳು
ಮಾತು ಮಾತಿಗೆ ಮುತ್ತು ಸುರಿಸುವವಳು.
ಚೆಂಗುಲಾಬಿಯ ಚೆಲುವೆ
ಚೆಂದುಟಿಯನರೆತೆರದು
ಉಸಿರುಸಿರಿಗೂ ಕಂಪ ಸೂಸುತಿಹಳು.

೩

ಹಾಲುಗಲ್ಲಿನ ಮೇಲೆ
ಬೆಳುದಿಂಗಳಿಳಿದಂತೆ
ನಗೆಯ ಹೊಂಗೇದಗೆಯ ಮುಗುದೆಯಿವಳು;
ಮುಂಜಾವು ಉಷೆಯಂತೆ
ಸಂಜೆ ಅಪ್ಸರೆಯಂತೆ
ಕಣ್ಣು ಕಣ್ಣಿಗೆ ದೀಪ ಮಿನುಗಿಸುವಳು!

೪

ನಲುಮೆದೋಳುಗಳಲ್ಲಿ
ಒಲವು ಮಾತುಗಳಾಡಿ
ಮುದ್ದಿಟ್ಟು ಮೂಲೋಕ ಮರೆಸಿದವಳು;
ನಿದ್ದೆ ಬಂದವರಂತೆ
ಎದೆಯಲ್ಲಿ ಹುದುಗಿರಲು
ಕದ್ದು ನೋಡುವ ಆಶೆ ಹಚ್ಚಿದವಳು.

೫

ಅಳಲ ಕಂಬನಿಯೊರಸಿ
ಸೊಗದ ಹೂಮಳೆ ಸುರಿಸಿ
ಮೌನವಾಗಿಯೆ ಮನವ ಮಿಡಿಯುವವಳು;
ನೆನೆಸಿದೊಡನೆಯೆ ಕನಸಿ -
ನಲ್ಲಿ ಕೋರಯಿಸುವಳು
ಜೀವ ಜೀವಾಳದಲಿ ಕೂಡಿದವಳು.

ಉಷೆಯು ಗೆಳತಿ

ಏಳೆನ್ನ ಮನದನ್ನೆ, ಏಳು ಮುದ್ದಿನ ಕನ್ನೆ
ಏಳು ಮಂಗಳದಾಯಿ ಉಷೆಯು ಗೆಳತಿ -
ಏಳು ಮುತ್ತಿನ ಚೆಂಡೆ, ಏಳು ಮಲ್ಲಿಗೆ ದಂಡೆ
ಏಳು ಬಣ್ಣದ ಬಿಲ್ಲೆ ಮಾಟಗಾತಿ!

ಏಳೆನ್ನ ಕಲ್ಯಾಣಿ, ಏಳು ಭಾವದ ರಾಣಿ
ನೋಡು ಮೂಡಲದಲ್ಲಿ ರಾಗಮಿಲನ!
ಮರದುದಿಯ ತೋರಣದಿ ಹೊಂಬಿಸಿಲ ಬಾವುಟವು
ಗಾಳಿವಟ್ಟೆಯಲದರ ಚಲನವಲನ.

ಏಳು ಬಾಳಿನ ಕೊಳಲೆ, ಸರಳ ಸುಂದರ ತರಳೆ
ಹಕ್ಕಿ ಹಾಡಿಗೆ ಮಧುರ ದನಿಗೂಡಿಸು;
ಹೂವು- ಹಾಸಿಗೆಯಿಂದ ಬಂದ ಸೂಸಲಗಾಳಿ
ಪಿಸು ಮಾತನಾಡುತಿದೆ ನಸು ಆಲಿಸು.

ಮಂಜಿನರಳೆಯ ಹಿಂಜಿ ತೂರುತಿಹ ನೇಸರನು
ಹಿಮಮಣಿಯ ದರ್ಪಣದಿ ತನ್ನ ಕಂಡು
ಮಿರುಗಿ ಹೋಗರೇರಿಹನು!ಏಳೆನ್ನ ಹೊಂಗೆಳತಿ
ಮೊಗದ ಜವನಿಕೆ ತೆರೆದು ನಗೆಯ ನೀಡು.

ಲಲಿತ ಶೃಂಗಾರ ರಸಪೂರ್ಣೆ ಚಂದಿರವರ್ಣೆ
ದೃಷ್ಟಿ ತೆಗೆಯಲು ಒಂದು ಮುತ್ತನಿಡುವೆ;
ನಿನ್ನ ಸಕ್ಕರೆ ನಿದ್ದೆ ಸವಿಗನಸ ಕತೆ ಹೇಳು
ಒಂದು ಚಣ ಜಗವನ್ನೆ ಮರೆತು ಬಿಡುವೆ.

ನಿರೀಕ್ಷೆ

ಮನೆಯ ಮಂಗಳಮೂರ್ತಿ ಮೌನದಾಳದಿ ಮುಳುಗಿ
ಕಣ್ಣ ರತ್ನದ ಖಣಿಯ ದೀಪಿಸಿಹಳು -
'ಸಂಜೆಯಾಯಿತು ಈಗ ಬಂದೆ ಬರುವರು' ಎಂದು
ಒಂದೆ ಚಿಕ್ಕೆಯ ತೆರದಿ ಜಾನಿಸಿಹಳು.

ತುಂಬುಗೈ ಬಾಗಿಲಿಗೆ ಇಂಬುಗೊಟ್ಟಿದೆ. ಕಾಲ
ತುದಿಬೆರಳು ಹೊಸತಿಲಕೆ ಹೂವಾಗಿದೆ!
ನೆಟ್ಟ ದಿಟ್ಟಿಯು ದಾರಿ ನೋಡಿ ನಿಟ್ಟುಸಿರಿಡಲು-
ಜಡೆಯುದ್ದಕ್ಕೂ ಚಿಂತೆ ಹೊಯ್ದಾಡಿದೆ!

ಏನೊ ನೆನಪಾದಂತೆ ಒಳಗೆ ಮೆಲ್ಲಗೆ ನುಸುಳಿ
ದೀಪವಂಟಿಸಿ ಸುಪ್ರಸನ್ನ ಮೊಗದಿ
ಚಿನ್ನೆ! ಹೆಜ್ಜೆಯ ಗುರುತನೆಂದೊ ಅರಿತವಳಂತೆ
ಬಂದೆ ಬರುವಳು ಇದಿರುಗೊಂಬ ಭರದಿ.

ಹಗಲುಗನಸೇ ಮಾಗಿ ಬೈಗು ಸುಂದರವಾಗಿ
ಪೂರ್ಣಗೊಂಡಿದೆ ಬಾನ ಸ್ವರ್ಣನಕ್ಷೆ,
ಹೆಣ್ಣು ಜೀವದ ಹಲವು ಬಯಕೆ ಬಣ್ಣವ ಕೂಡಿ
ಮೂಡಿ ನಿಂತಾತಿಹುದು ಈ ನಿರೀಕ್ಷೆ.

ಸ್ನಿಗ್ಧನೋಟದೊಳಖಿಲ ಬ್ರಹ್ಮಾಂಡ ಮಿದುಗೊಂಡು
ಮೆಲಿತು ನಲ್ಮಾತಿನಲಿ ತೇಲುತಿಹುದು -
ಬಾನು ಬುವಿಗಳ ತುಟಿಗೆ ಹುಣ್ಣಿಮೆಯು ಮುತ್ತಿಟ್ಟು
ಬರುವ ಬೆಳುದಿಂಗಳವ ಹೋಲುತಿಹುದು.

ಪಡುವಣದ ಸಂಜೆವೆಣ್ ನಡುಮನೆಗೆ ಬಂದಂತೆ
ರಾಗಪುಲಕಿತೆ ಎದೆಯನಾಳುತಿಹಳು -
ಮಳೆಬಂದ ಮರುಚಣದ ಇಳೆಯ ಹೊಸತನದಂತೆ
ಅಡಿಗಡಿಗು ಈ ಬಾಳ ಬೆಳಗುತಿಹಳು.

ಮೌನಭಾರ

ತುದಿಬೆರಳಲೆನ್ನ ಗಲ್ಲವ ಪಿಡಿದು ಮುದ್ದಿನಲಿ
'ಮುದ್ದು, ಚಿನ್ನಾ' ಎಂದು ಕರೆಯುವವರು,
ಕುರುಳ ತಿದ್ದುತ ಹೆರಳಮಾಲೆಯನು ನೇರ್ಪಡಿಸಿ
'ಮಲ್ಲಿಗೆಯೆ ಮಾತಾಡು' ಎನ್ನುವವರು.

ಕಂಕಣದ ಕಿಂಕಿಣಿಯ ದನಿಯನಾಲಿಸಿ ಬಂದು
ಸಪ್ಪಳಿಲ್ಲದೆ ಎದೆಯನಪ್ಪುವವರು,
ಜೇನು ಹಾಡಿಗೆ ಮನವ ಮಾರುಗೊಂಡೈತಂದು
ಮುತ್ತು - ಸವಿಗೆಂದಿಗೂ ತಪ್ಪದವರು.

ನಕ್ಕು ನಗಿಸುತ ಮನೆಯ ತುಂಬಿ ತುಳುಕಿಸುವವರು
ಅಕ್ಕರೆಯ ಸಂತೋಷ ಲಹರಿಯವರು;
ಒಂದೆ ಕಂಬನಿಯಲ್ಲಿ ಕರಗಿ ನೀರಾಗುವರು
ನವಿರು ನವಿರೊಳು ನಲ್ಮೆ ಚಿಮ್ಮುವವರು,-

ಇಂದಾವ ಬೇಸರವು ಎದೆಯನಾವರಿಸಿಹುದು
ನಿಮ್ಮ ಪಾಲಿಗೆ ಮೌನ ಬಂದುದೇಕೆ?
ಗಿರಿಯ ಗಂಭೀರತೆಗೆ ಮನೆಯೆ ಬಿಮ್ಮೆಂದಿಹುದು
ನವಿಲು ಮರೆತಂತಿಹುದು ತನ್ನ ಕೇಕೆ.

ಸರಸ ಸಲ್ಲಾಪಗಳ ಸರಸಿ ಬತ್ತುತಲಿರಲು
ಈ ಸರೋಜಕೆ ಬೇರೆ ಜೀವವಿಹುದೆ?
ಒಪ್ಪವಾಗಿದ್ದವರು ಸಪ್ಪೆ ಮುಖ ಮಾಡಿರಲು -
ಎಳೆದು ತಂದಿಹ ನಗೆಯು ಚಂದವಹುದೆ?

ನೀವು ಮರುಗಿದರೆನ್ನ ಜೀವಕ್ಕೆ ತಂಪಿಹುದೆ?
ನಸುಮುನಿಸಿಗೂ ನೆಲಕೆ ಇಳಿದುಬಿಡುವೆ-
ಬಂದುದೆಲ್ಲವು ಬರಲಿ ನಗೆಯು ಚಿರವಾಗಿರಲಿ
ಇಂದ್ರಲೋಕವನಿಲ್ಲಿಗೆಳೆದು ತರುವೆ!

ಬಾನ ಬೀದಿಯೊಳಲ್ಲಿ ಹುಣ್ಣಿಮೆಯ ರಥದಲ್ಲಿ
ಚಂದ್ರನೊಸಗೆಯು ಬಾರ ಬಾ ಚಕೋರ,
ಕಣ್ಣು ಕಾತರಿಸಿಹವು ಎದೆಯು ಹಾರೈಸಿಹುದು
ತಾಳಲಾರೆನು ಇನ್ನು ಮೌನಭಾರ!

ಪಯಣ

ಬಂತು!..... ಬಂದನಿತರಲೆ ಹೊರಟು ನಿಂತಿತು ರೈಲು!
'ಹೋಗಿ ಬರುವಿರ?' ಎಂಬ ಧ್ವನಿಯು ಎದೆ ಕಲಕಿರಲು
ಹರುಷ ದುಃಖಗಳೆರಡು ಮೌನದಲಿ ಮೊಳಗಿರಲು
ರೈಲು ಸಾಗಿತು ಮುಂದೆ ಮೈಲು ಮೈಲು!

ಕಿಟಕಿಯಲಿ ಕರವಸ್ತ್ರ ಒಲುಮೆ ಬಾವುಟದಂತೆ
ಎದೆಯ ತಡಬಡದೊಡನೆ ಮಿಡುಕುತಿತ್ತು;
ಯಂತ್ರವೇಗಕೆ ಮನುಜನೆದೆಯ ರಾಗೋದ್ವೇಗ
ಸಿಳ್ಳು ಹಾಕುತ ಕೂಗಿಕೊಳ್ಳುತಿತ್ತು!
ಬಿಟ್ಟಹೊಗೆ... ಧಗೆ ಮೋಡ ಗಾಳಿಯಲಿ ನೂಲಾಗಿ
ಹೊರಳಾಡುತಿರಲಲ್ಲಿ ಅಲಸಿ ಅಲಸಿ,
ನಿರ್ಜನದ ನೀರವದ ಭಣಗುಡುವ ನಿಲ್ದಾಣ
ರಣರಣಕಗೊಂಡಿತ್ತು ನೆನೆಸಿ ನೆನೆಸಿ!

ವಿರಹ ಕೂಜನ

೧

ಮನೆಯೊಳಗೆ ಅತ್ತಿತ್ತ ಕಾಲು ಸುಳಿದಾಡುತಿವೆ
ಕಂಡು ಕಂಡೂ ಕಣ್ಣು ಹುಡುಕುತಿಹವು;
ಸುಮ್ಮ ಸುಮ್ಮನೆ ಕಿವಿಗಳೇನೊ ಆಲಿಸಿದಂತೆ -
ತಮ್ಮ ರೂಢಿಗೆ ತಾವೆ ನಾಚುತಿಹವು.
ಅಡುಗೆ ಮನೆಯೊಳು ಬರಿಯ ಹೊಗೆಯಾಡಿದಂತಿಹುದು
ದಿನದ ಗುಂಜಾರವದ ನಿನದವಿಲ್ಲ;
ನಡುಮನೆಗು ಪಸರಿಸುವ ನಗೆಯ ಸುಳಿವೇ ಇಲ್ಲ
ಸಜ್ಜೆವನೆ ಪರಿಪಾಟು ಶಿವನೆ ಬಲ್ಲ.

೨

ಸಂಜೆ ಮನೆಗೈತರಲು ಪ್ರೇಮಪೂರ್ಣಿಮೆ ನಗಲು
ಹುಣ್ಣಿಮೆಗು ಹೊಸಬಣ್ಣ ಮೂಡುತಿತ್ತು;
ಇಡಿಯ ದಿನದಾಯಸವು ಮಂದಹಾಸದಿ ಕರಗಿ
ಸ್ವಚ್ಛಂದ ಛಂದದಲಿ ಹಾಡುತಿತ್ತು.
ಗಾಳಿಯಲೆಗೂ ನಲುಮೆ ಬೆರಳನಾಡಿಸಿದಂತೆ
ತರಳೆಯೊಲವಿನ ಹೊಳವುದೋರುತಿತ್ತು;
ಬೆಣ್ಣೆಯೊಳಗಿನ ಕೂದಲೆಳೆಯ ಹೊರದೆಗೆವನಿತು
ನಯವಾಗಿ ದಿನಬಳಕೆ ಸಾಗುತಿತ್ತು.

೩

ತವರುಮನೆ ನೆನೆದೊಡನೆ ಹಗಲೆಲ್ಲ ಹಿಗ್ಗಿದಳು
ನನ್ನ ಅನುಮತಿಗೆನಿತೊ ಅಮೃತಧಾರೆ-
ಮರುಗಳಿಗೆಯಲಿ ಮತ್ತೆ ಇರುಳು ಕೊರಳನ್ನಪ್ಪಿ
'ಅಗಲಲಾರೆನು' ಎಂಬ ಕಣ್ಣಧಾರೆ!
ಅವಳಿಗೋ ಮೊದಲ ಸಲ ತವರುಮನೆ ಹಂಬಲವು
ನನಗೊ ಅಗಲಿಕೆಯೊಂದು ಮಧುರಶಾಪ.
ಹೆತ್ತ ತಾಯ್ತಂದೆಗಳ ಕರುಳ ಮಲ್ಲಿಗೆಯರಳ
ಕಳಿಸಿರುವೆ ನಾಲ್ಕುದಿನ ಇರಲಿ ಪಾಪ!

೪

ಅಂದು ಆಗಿನ ಬುದ್ಧಿ ಇಂದಿಗಿರಬೇಕಲ್ಲ-
ಸಾಕು ಸಾಕೆನಿಸಿಹುದು ಮೂಕ ಮನಕೆ.
ಏಕಾದರೂ ಕಳಿಸಿ ಏಕಾಕಿಯಾದೆನೋ-
(ಪತ್ರ ಬಂದಿದೆ; ಅದರಷ್ಟೇ ಸಾಕೆ?)
ಒಂದು ತೋಪಿನ ಮರದಿ ಕುಳಿತ ಬೇಳವನಹಕ್ಕಿ
ಕಳುಹಿಸಲು ಕೂಜನದ ಪ್ರಣಯಗೀತ
ಸ್ವಿಚ್ಚನೊತ್ತಲು ಬಲ್ಬು ಬೆಳಕು ಚಿಮ್ಮುವ ತೆರದಿ
'ಕೂS' ಎಂದು ಅದರ ಸಖಿ ಎದೆಯು ಮಿಡಿತ!

* * *

ಇಂದು ಬಂದಿಹ ಓಲೆಯಲ್ಲಿ ಮರುಕದ ಸಾಲು:
"ರವಿವಾರ ದಿನ ನೀವು ಬರಲೆಬೇಕು"
ಅದು ಎಲ್ಲ ಸರಿ. ಅದರಿಂದು ಮಂಗಳವಾರ
ನಾಲ್ಕು ದಿನಗಳನೆಂತು ನೂಕಬೇಕು?

ಮಗುವಿಗೆ

ಮ್ಮ ಬಾಳಬಳ್ಳಿಗೊಗೆದ ಹೊಚ್ಚ ಹೊಸತು ಮಲ್ಲಿಗೆ!
ಲೆಮುಗಿಲಿನ ಒಲವು ಗೆಲವು ಪಡೆದು ಬಂದಿತಿಲ್ಲಿಗೆ!
ರಿಮಳಿಸಿತು ತುಂಬಿತೋಟ ನಿನ್ನ ಒಂದೆ ಸೊಲ್ಲಿಗೆ
ಪುಟ್ಟ ಎಸಳುಗೈಗಳನ್ನು ಮುಟ್ಟಲೇನು ಮೆಲ್ಲಗೆ?)

ನಿದ್ದೆಯಲ್ಲಿ ನಗುವೆ ನೀನು ನಮ್ಮ ಬುದ್ಧಿಯಾಚೆಗೆ
ತೇಲುತಿರುವ ಮುದ್ದು ಹಂಸ ಕೊಳದ ಸ್ವಪ್ನವೀಚಿಗೆ
ತಾವರೆಯಲಿ ಹೊಚ್ಚಿದಂತೆ ಅಮ್ಮ ಹೊಲಿದ ಕುಂಚಿಗೆ
ನಮ್ಮ ಬಾಲ್ಯ - ಚಿತ್ರ- ಲೀಲೆಗಳ ವಿಶೇಷ ಸಂಚಿಕೆ!

ಳಿಗಡಲಿನಲ್ಲಿ ಹುಟ್ಟುಕಡೆಯುತಿರುವ ಕೈಗಳು!
ಲಗಿದಲ್ಲೆ ಬೈಸಿಕಲ್ಲು ತುಳಿವ ಪುಟ್ಟ ಕಾಲ್ಗಳು!
ಪ್ಪು ಅಗಲ ಬಾಯಿ ತೆಗೆದು ಆಕಳಿಸುವೆ ಪಗಳು
ದೆ ಸಮನೆ ನೋಡುತಿರುವೆ ನೋಯುವೇನು ಕಂಗಳು?

ನೀನು ಅಳುವ ದನಿಯು ಮಧುರ ರಾಗವಾಗಿ ಸೆಳೆವುದು!
ಗೂಡಿನಲ್ಲಿ ಗುಬ್ಬಿಮರಿಯು ಚಿಂವ್‌ಗುಡುವ್ವೊಲು ಸುಳಿವುದು;
ಇಷ್ಟು ಈಟು ಇರುವಾಗಲೆ ಹಟವ ತೆಗೆದು ನಮ್ಮನು
ಹೆದರಿಸುವೆಯ? ನೋಡು ಮತ್ತೆ ಬಂದು ಬಿಡುವ ಗುಮ್ಮನು!

ಮ ಒಲುಮೆ ತೂಗುತಿರಲು ನಿನ್ನ ಮುದದ ತೊಟ್ಟಿಲು
ಕಪಾದಿ ಏರುತಿರುವೆ ದಿನದಿನಗಳ ಮೆಟ್ಟಿಲು!
ದದ ಹರಕೆ ನವೋದಯಕೆ ನೂರು ದೀಪ ಹಚ್ಚಲು
ಮ್ಮದೆಯಾನಂದಕೆಲ್ಲ ಕಂದ ನೀನೆ ಚೊಚ್ಚಲು.

ತುಂಬುದಿಂಗಳು

ಮೊನ್ನೆ ದೀಪಾವಳಿಗೆ ಒಂದು ತಿಂಗಳು ದಣೇ
ತುಂಬಿಹುದು; ಆಗಲೇ ಸುಳುವು ಹಿಡಿಯುವ ಮೋಡಿ!
ತೆರೆದು ಬಣ್ಣಲಗಣ್ಣ ಬಿಟ್ಟೊ ಬಿಡದೆ ನೋಡಿ
ಮಿಟ್ಟು ಮಿಸುಕದೆ ಇರುವ (ನಾನು ಅಪರಿಚಿತನೇ?)
ಎತ್ತಿಕೊಂಡರೆ ತುಸುವೆ ಅತ್ತಂತೆ ಮಾಡಿ, ಮರು -
ಗಳಿಗೆಯಲಿ ಬೆಚ್ಚಗೆ ಬಟ್ಟೆ ತೊಯ್ಸಿ ಗೊತ್ತಿಲ್ಲ -
ದವರಂತೆ ಸುಮ್ಮನಿರೆ (ಇದನಾರು ಕಲಿಸಿಲ್ಲ!)
ಬೇರೆ ಬೇಕೇ ಶಿಕ್ಷೆ? ಹಗಲು ನಿದ್ದೆಯ ಹೊಡೆದು
ದೀಪ ಹಚ್ಚುವ ಹೊತ್ತಿಗಾಗಲೇ ಕಣ್ದೆರೆದು
ಇರುಳೆಲ್ಲ ತಂತಿ ಮೀಟಿದ ತೆರದಿ ದನಿತೆಗೆದು
ಪಹರೆ ಮಾಡುವನೀತ. ಮುಟ್ಟಿಗೆಯ ಬಿಗಿಹಿಡಿದು
ಕುಟ್ಟಿ ಗಾಳಿಯ ಒಂಟಿಕುಸ್ತಿಯಾಡುವ ಜಟ್ಟಿ!
'ಹಸಿವೆಯಾದರೆ ಒಂದು ನಿಮಿಷ ತಡೆಯಲು ಒಲ್ಲ'
ಇರಬಹುದು; (ಅದು ಮಾತ್ರ ನನ್ನ ಖಾತೆಯದಲ್ಲ.)

ಆನಿ ಬಂತವ್ವಾಽಽನಿ

ಆನಿ ಬಂತವ್ವ ಆಽನಿ
ಇದು ಎಲ್ಲಿತ್ತವ್ವ ಮರಿಯಾನಿ||
ಕಳ್ಳಿಸಾಲಾಗ ಮುಳ್ಳ ಬೇಲ್ಯಾಗ
ಓಡಿಯಾಡತಿತ್ತಾಽನಿ,
ಕಾಲ ಮ್ಯಾಲ ಅಂಗಾತ ಮಲಗಿ
ತೂರನ್ನತೈತಿ ಈ ಆಽನಿ!
ಎಂಥ ಚಿಟ್ಟಾನಿ
ನನ್ನ ಕಟ್ಟಾಣಿ
ಇದಕ ಯಾರಿಲ್ಲ ಹವಽಣಿ.
ಆನಿ ಬಂತವ್ವ ಆಽನಿ
ಅಡವಿ ಕಡೆಯಿಂದ ಹಿಂಡಿನೊಳಗಿಂದ
ದುಂಡಗುರುಳಿ ಬಂತಽ
ದಾರಿ ಮಂದೆಲ್ಲ ಮೀರಿ ತುರುಕಿದರ
ಕೊಸರಿಕೊಂಡು ಬಂತುಽ
ನನ್ನ ಬಂಗಾರ
ಮುದ್ದು ಸಿಂಗಾರ
ಬಾರ ನನ್ನ ಕುವರಾ
- ಒರಸತೇನಿ ಬೆವರಾ;
ನಿನ್ನ ನೋಡಿ ಮುದ್ದಾಡಿ ಹಾಡಿ
ಅಪ್ಪಿದರ ದುಃಖ ಹಗುರಾ
ಅಪ್ಪಿದರ ದುಃಖ ಹಗುರಾ;
ಮರದ ಕೊಂಬಿಯನು ಮುರಿದು ಚೆಲ್ಲುವಾ

ಸೊಂಡಿ ಇಲ್ಲ ಇದಕs
ತಳಿರ ಕೈಯಿಂದ ಕೊರಳನಪ್ಪಿದರ
ಸುಗ್ಗಿ ಹಾಂಗ ಬದುಕs.

ನನ್ನ ಕಂದ
ದಿನಕೊಂದು ಚಂದ
ಭವ ಬಂಧ ಬಿಡಿಸ ಬಂದs
ಮನಿ ತುಂಬ ಇದರ ಗಂಧs
ತೊದಲು ತುಟಿಗೆ ತಪ್ಪೆಜ್ಜಿ ಹಾಕಿ
ಬರತೈತಿ ಓಡಿ ಓಟಿ,
ಬಂದು ಸೆರಗ ಮರೆಯಲ್ಲಿ ಅವಿತು
ಹುಡು ಹುಡುಕುವಾಟ ಮಾಟ.

ಆನಿ ಬಂತು ಅರಸಾನಿ ಬಂತು
ದೊರೆಸಾನಿ ಬಳಿಗೆ ಬಂತು;
ನನ್ನ ಅರಸರಾ ಪಟ್ಟದಾನಿ ಇದು
ಬಾಳ ಗುಟ್ಟ ತಂತು.
ನನ್ನೊಡಲ ಜೀವ ಜೀವಾಳದಾಗ
ಚಂದ್ರಾಮನಾಗಿ ನಿಂತು,
ಹುಣ್ಣೀವಿ ದಿನದ ಬೆಳದಿಂಗಳ್ಹಾಲ
ಕುಡಿಲಾಗ ಬಂತ ಬಂತು.
ಆಕಾಶದಾಗ ಚಿಕ್ಕೀಯ ಚಟ್ಟು
ಕಟ್ಟೇತಿ ನಿನಗೆ ಬಾಳಾ
ಜಗವು ತೊಟ್ಟಿಲಾ, ಚಂದ್ರ ಬಟ್ಟಲಾ
ತುಂಬ ಹಾಲ ಕೊಡುವಾ
ದೇವರಲ್ಲ ಬಡವಾ.

ಜಾಜೀಯ ಬಳ್ಳಿ ಕುಡಿಗ್ಯೆಯ ಚಾಚಿ
ನೀಡೇತಿ ನಿನಗ ಹೂವಾ
ನಿನ ಮ್ಯಾಲ ಅದರ ಜೀವಾ.

ಬಡಕೊಂಡ ಜೀವ ಉಳಕೊಂಡು ಹೇಗೊ
ನಿಂತ್ಯೆತಿ ಕುಡಿದು ವಿರಸಾ
ನೀನೇನ ಪಡೆದು ಬಂದೀಯೊ ಏನೊ
ನೀ ನನ್ನ ಕನಸ ಮನಸಾ.
ಯಾರಾರ ದೃಷ್ಟಿ ಬಡಿದೀತು ಬಾರೊ
ಚಂದ್ರಾಮ ಚಲುವ ನೀನು-
ಹಾಲುಗಲ್ಲದಾ ಹಸುಳೆ ತಾಯಿ,
ಸುರಿದೀತು ಜೊಲ್ಲು - ಜೇನು.

ಬಾ ಬಾರೋ ಕಂದ
ಏನಂದ ಚೆಂದ!
ಬಾ ಇಂದ್ರ ಪಟ್ಟದಾನಿ
ದುಡು ದುಡೂ ಬಂದು
ಕಾಲಾಗ ನಿಂತು
ತೂರ್‍ಯಾಡು ಆನಿಯಾಡು

ಮುದ್ದಣ – ಮನೋರಮೆ

ಮುದ್ದಣ ಮನೋರಮೆಯರಿನಿವಾತನಾಲಿಸಲು
ಕನ್ನಡದ ಬೆಳ್ನುಡಿಯು ಹೊಂಬೆಳಗಿನುನ್ನತಿಯ
ಕಾಣಲೆಂದಾಸೆಯಿರೆ ಜೇನುಂಡ ಆರಡಿಯ
ಝೇಂಕೃತಿಗೆ ಕಿವಿದೆರೆದು ಕೇಳು ಎದೆತಣಿಯುವೊಲು.
ತನಿವಣ್ಣ ತಿನಲಿತ್ತು ಕೆನೆವಾಲನೀಯುವರು.
ಏನು ಜೊತೆ! ಎಂಥ ಕಥೆ! ನಾಲ್ಮೊಗನ ಅಗ್ಗಿಟ್ಟಿ-
ಯೊಗೆದ ಮುತ್ತಿನ ಚೆಂಡು! ಮಾತೊಂದು ರಸಘಟ್ಟಿ!
ನಸುನಗೆಯ ನಸೆಗಾರ್ತಿ, ಕಬ್ಬಿಗನ ಕಲ್ಪತರು!
ಮುದ್ದಣನ ಮುದ್ದುನುಡಿ ಮನೋರಮೆಗೆನಿತೆನಿತೊ
ಅನಿತನಿತೆ 'ರಾಮಾಶ್ವಮೇಧ' ರುಚಿ ಕನ್ನಡಕೆ.
ಕಂಡುಗವ ಬಳ್ಳದಿಂದಳೆದ ನಲ್ಗತೆ ಸೊಗಕೆ
ಚೆಂಬವಳನಿಕ್ಕುವಂ; ತಿರುಳ ಕಾಣಿಕೆ ಪೊಸತೊ.
ಬಣ್ಣಗಬ್ಬಿಗನೊರೆದ ಬಟ್ಟೆದೋರಿಪ ಕೃತಿಯು
ಅಂತಪ್ಪೊಡಿಂತಿದುವೆ ಮೆಚ್ಚಿದೆದೆಯುಡುಗೊರೆಯು.

ಹಾಡಿನೊಡತಿ

೧

ಸವಿಹಾಡ ರಸವತಿಯೆ
ಎದೆಯನ್ನೆ ಕನ್ನೆ,
ನಿನ್ನೆದೆಯ ಬೀಣೆಯನು ನುಡಿಸು ಚೆನ್ನೆ!
ನುಡಿದು ಪಡಿನುಡಿದು ಎದೆವನೆದೆರೆದು ನುಡಿಯೆ.

೨

ಜೀವಸಂಜೀವಿನಿಯೆ
ಕಲ್ಪನಾಮೋದೆ,
ಹೋಗಾಡಲೀರೋತೆ ಹಾಡು ಪ್ರಮದೆ
ಅಂಬರವ ತುಂಬಿ ತುಳುಕಿಸಿ ಗಾನ ಸುರಿಯೆ!

೩

ಚಿತ್ಕಲಾ ಸುಂದರಿಯೆ
ಲಲಿತಾರವಿಂದೆ,
ಪುಳಕದಲಿ ಗುಡಿಗಟ್ಟಿ ಬಂದು ನಿಂದೆ
ಹಾಡು ಹಾಡೆನ್ನ ಕಂಗಳು ಕೋಡಿವರಿಯೆ!

೪

ಸುರುಚಿರ ವಿಲಾಸಿನಿಯೆ
ಝೇಂಕಾರವಾಣಿ!
ಚಿನ್ನಾದವಾನಂದಿ ಕವಿಯು ಮೌನಿ,
ರವಿಕಿರಣ ಮುದ್ದಿಡುವ ಹೂವಿನೊಲು ಒಲಿಯೆ,

೫

ಗಾಯತ್ರಿ ಕಲ್ಯಾಣಿ
ಚೆಲು ಚೆಲ್ವಗಾರ್ತಿ
ಭಾವಚಿಂತಾರತ್ನ ಕಾವ್ಯಸ್ಫೂರ್ತಿ
ಬಾಂದಳದಿ ಭೂತಲದಿ ನಾದ ನಿರ್ಝರಿಣಿ!

೬

ಹೊಂಗೆಳತಿ ಸಂಗಾತಿ
ಏನೆಂಥ ಪ್ರೀತಿ!
ರಸರಸಾಲದಿ ಕುಕಿಲುತಿರುವ ಖ್ಯಾತಿ
ರೋದೋಂತಪರ್ಯಂತ ನುಡಿ ಮಿಡಿಸು ತಂತಿ.

ಕವಿತೆಗೆ

ಕವಿತೆ! ಸುಲಲಿತ ಭಾವಸಂಪ್ರೀತೆ, ನನ್ನೆದೆಯ
    ಸುಪ್ತ ಸುಖದುಃಖ ವೀಣಾಕ್ವಣಿತ ಸಂಗೀತೆ
    ಚೈತ್ರಮುಖಿ ಕಣ್ಣನರಳಿಸು ವಿಮಲವಿಖ್ಯಾತೆ!
ಏನಿದ್ದರೇನು ವಿಶ್ವಂಭರಿತೆ ನಿನ್ನುದಯ
ಚಿರನೂತನೋತ್ಸಾಹ ಚೇತನಂ ಪಡೆವನಕ
    ಕವಿಮನವು ಬರಿಯುದಾಸೀನ ರಸಹೀನತೆಯ
    ದೀನತೆಯ ತವರು; ಅದೊ ವಿಶ್ವಮೋಹಿನಿ ಉಷೆಯ
ಚುಂಬನುತ್ಕರ್ಷತೆಗೆ ಭೂಮಿಗಿಳಿದಿದೆ ನಾಕ!
ಆವುದೋ ಮೂಲೆಯಲಿ ಕುಳಿತು ಭೂರಂಗದಲಿ
    ನಡೆವ ಅಕಟೋವಿಕಟ ನಾಟಕದ ಹಿನ್ನೆಲೆಯ
    ಬಗಿದು ನೋಡುವ ಬಯಕೆ ಬಗೆಯೊಳಿದೆ; ಮನ್ನಣೆಯ
ಅಳಿಯಾಸೆ ಮಣ್ಣುಗೂಡಲಿ, ಮಹಾಪೂರದಲಿ
    ಜಾಲಿಸಲಿ ಬಾಳಕೊಳೆ, ಬದುಕು ಮಡಿಯಾಗಿರಲಿ
    ಮೂಡು ಮುದ್ದಿನ ಕವಿತೆ ಋತಶಿವಾನಂದದಲಿ.

ಅವಳು ನನ್ನವಳಾಗಿ

ಆಕಾಶ -ಅಲ್ಲಿರುವ ಎಲ್ಲ ನಕ್ಷತ್ರಗಳು
ಜಗವು - ಮುಗಿಯದ ಅದರ ಎಲ್ಲ ಸಂಪದವು
ನನ್ನ ವಶವಾದರೂ ನಾನು ಇನ್ನಿಷ್ಟು ಬಯಸಬಹುದು;
ಆದರೆ ನಾನು ಸಂತೃಪ್ತ, ನೆಲದ ಮೇಲಿನ ಸಣ್ಣ ಮೂಲೆ ಸಾಕು.
ಅವಳು ನನ್ನವಳಾಗಿ ಮಾತ್ರ ದೊರೆಯಬೇಕು.

Lover's Gift :

ನುಗ್ಗಿ ಬಂದಿತು ಎಲ್ಲ ಲೋಕದಾನಂದವದು

ನುಗ್ಗಿ ಬಂದಿತು ಎಲ್ಲ ಲೋಕದಾನಂದವದು
ನನ್ನ ದೇಹದ ಗೇಹ ರಚನೆಗೆಂದು,
ಮುದ್ದನಿಟ್ಟವು ಬಾನ ಬೆಳಕು ಬಿಟ್ಟೂ ಬಿಡದೆ
ಅವಳು ಎಚ್ಚರಗೊಂಡು ಏಳುವರೆಗು,

ತ್ವರೆಯಿಂದ ಬಂದ ಬೇಸಗೆ ತಂದ ಹೂವುಗಳು
ಅವಳ ಉಸಿರಾಟದಲಿ ಉಸಿರಿಟ್ಟವು.
ಹರಿವ ನೀರಿನ, ಬೀಸುಗಾಳಿಗಳ ಸೂಸುದನಿ
ಅವಳ ಸಂಚಲನದಲಿ ಸರಗೈದವು.

ಮೋಡಗಳ, ಕಾಡುಗಳ ಬಣ್ಣದೇರಿಳಿತಗಳು
ಅವಳ ಬಾಳಿಗೆ ಹರಿದು ಮೀಯಿಸಿದವು;
ಎಲ್ಲ ಎಲ್ಲದರ ಸ್ವರ ಮಾಧುರ್ಯವವಳ ಅಂ-
ಗಾಂಗಳ ಲಾಲಿಸುತ ರೂಪಿಸಿದವು.

ಅವಳೆನ್ನ ಕೈಹಿಡಿದ ಕನ್ನೆ - ನನ್ನೀ ಮನೆಗೆ
ತನ್ನ ದೀಪವ ಹಚ್ಚಿ ಬೆಳಗಿಸಿದಳು.

'Fruit - Gathering'
LXXII

ನನ್ನವಳೀ ಶರದೃತು

ನನ್ನವಳೀ ಶರದೃತು.
ನನ್ನೆದೆಯೊಳೋಲಾಡಿದವಳು.
ಅವಳ ಕಾಲಂದಿಗೆಯ ಹೊಳೆವ ಗೆಜ್ಜೆಗಳು
ನನ್ನ ನರನರಗಳಲಿ ಝಣೆರು ಝಣೆರು!

ಅವಳ ಮಂಜಿನ ಮುಸುಕು
ಪಟಪಟಿಸಿತೆನ್ನುಸಿರೊಳು.
ನನ್ನ ಕನಸುಗಳಲ್ಲಿ
ಅವಳ ತಲೆಗೂದಲಿನ ಮೃದುಲ ಸೋಂಕು.

ನನ್ನ ಬಾಳನು ತುಡಿದು ಕಂಪಿಸುವ ಎಲೆಗಳಲಿ -
ಎಲ್ಲೆಡೆಗು ಹರಡಿರುವಳು.
ನೀಲ ಬಾನಿಂದವಳ ನಗುವ ಕಣ್ಣುಗಳು
ತಮ್ಮ ಬೆಳಕನು ಕುಡಿದವೆನ್ನೆದೆಯೊಳು.

'Lover's Gift'- 5

ನಾವಿಬ್ಬರು

ಹೂತೋಂಗಲಲಿ ಕುಳಿತು, ಹೊಂಬಕ್ಕಿ ಹಾಡುತಿರೆ
ಎನ್ನೆದೆಯು ಸಂತಸದಿ ಕುಣಿಯುತಿಹುದು;
ನಾವಿಬ್ಬರೂ ಒಂದೆಹಳ್ಳಿಯಲಿ ಬಾಳಿಹೆವು -
ಈ ಬಗೆಯ ಬದುಕೆಮ್ಮ ಹಿಗ್ಗಿಸಿಹುದು.

ನಮ್ಮ ತೋಪಿನ ನೆಳಲ ಹಸುರ ಮೇಯಲು ಬಹವು
ಅವಳ ಮುದ್ದಿನವೆರಡು ಕುರಿಮರಿಗಳು,
ಹಾದಿತಪ್ಪುತ ನಮ್ಮ ಗೋದಿ ಹೊಲಕೈತರಲು
ಅಕ್ಕರತೆ ತೋಳಿನಲಿ ತೆಗೆದಪ್ಪಲು.

ನಮ್ಮೂರು 'ಕಂಜನಾ', ಹರಿದಿಹುದು ಹೊಳೆಯೊಂದು
'ಅಂಜನಾ' ಎಂದದನು ಕರೆಯುತಿಹರು;
ನಮ್ಮೂರಿನವರೆಲ್ಲ ನಾನೆಂದರರಿತಿಹರು
'ರಂಜನಾ' ಎಂದವಳಿಗಿಟ್ಟ ಹೆಸರು.

ನಮ್ಮ ಬನದಲಿ ಹುಟ್ಟುಕಟ್ಟಿರುವ ತುಂಬಿಗಳು
ಅವಳ ಬನಕೋಡುವವು ಜೇನರಸಲು,
ಅವಳ ತೋಟದಲರಳಿ ಜಗುಳಿರುವ ಹೂಜಲ್ಲಿ
ನಾವು ಮೀಯುವ ಝರಿಗೆ ತೇಲಿಬಹುವು.

ನಮ್ಮೆರಡು ಬೀಡುಗಳ ನಡುವಿರುವ ತಾಣದಲಿ
ಒಂದೆ ಹೊಲವಿಹುದಲ್ಲಿ ದಾರಿತುಂಬಿ,
ಅವಳ ಹೊಲದಿಂದೆಮ್ಮ ಮಾರುಕಟ್ಟೆಗೆ ಬಹವು
ಒಣಗಿರುವ ಕುಜ್ಮಹೂ ಬುಟ್ಟಿದುಂಬಿ.

ನಮ್ಮೂರು 'ಕಂಜನಾ', ಹರಿದಿಹುದು ಹೊಳೆಯೊಂದು
'ಅಂಜನಾ' ಎಂದದನು ಕರೆಯುತಿಹರು;
ನಮ್ಮೂರಿನವರೆಲ್ಲ ನಾನೆಂದರರಿತಿಹರು
'ರಂಜನಾ' ಎಂದವಳಿಗಿಟ್ಟ ಹೆಸರು.

ಚೈತ್ರ ಮಾಸದಲವಳ ಮನೆಯ ಮುಂದಿನ ದಾರಿ
ಮಾಮರದ ಕಮ್ಮಲರ ಕಂಪೊಗೆವುದು;
ಅವಳ ಅಗಸೆಯ ಬೆಳೆಯು ಮಾಗಿ ಸುಗ್ಗಿಗೆ ಬರಲು
ನಮ್ಮ ಸಣಬಿಗೆ ಹೂವು ಚೆಲ್ವರಿವುದು!

ಅವಳ ಗುಡಿಸಲ ಮೇಲೆ ಮಿನುಗುತಿಹ ಚಿಕ್ಕೆಗಳು
ನಮ್ಮೆಡೆಗು ಅದೆ ಬೆಳಕ ಚೆಲ್ಲುತಿಹವು.
ಅವಳ ಕೊಳ ತುಳುಕಿಸುವ ತುಂತುರಿನ ಸೋನೆವಳೆ
ನಮ್ಮ ಪೇರಡವಿಯನು ಸೊಕ್ಕಿಸುವದು.

ನಮೂರು 'ಕಂಜನಾ', ಹಗಿದಿಹುದು ಹೊಳೆಯೊಂದು
'ಅಂಜನಾ' ಎಂದದನು ಕರೆಯುತಿಹರು;
ನಮ್ಮೂರಿವರೆಲ್ಲ ನಾನೆಂದರರಿತಿಹರು
'ರಂಜನಾ' ಎಂದವಳಿಗಿಟ್ಟ ಹೆಸರು.

The Gardener : 17



ಚೆನ್ನವೀರ ಕಣವಿಯವರು ಕನ್ನಡದ ಹಿರಿಯಕವಿಗಳ ಶ್ರೇಣಿಯಲ್ಲಿ ಅಗ್ರಗಣ್ಯರು. ಹೊಸಗನ್ನಡದ ಕಾವ್ಯಕ್ಷೇತ್ರದಲ್ಲಿ ಅವರ ಹೆಸರು ಎಂದೆಂದಿಗೂ ಹಸಿರು. ಕಣವಿಯವರು ಒಟ್ಟು ೧೬ ಕವನ ಸಂಕಲನಗಳನ್ನು ಹೊರ ತಂದಿದ್ದಾರೆ. ವಿದ್ಯಾ ವಿನಯ ಸಂಪನ್ನರಾದ ಕಣವಿಯವರು ಸರಳ ಜೀವಿ. ತಳುಕಿನ ವೆಂಕಣ್ಣಯ್ಯ ಸ್ಮಾರಕ ಗ್ರಂಥಮಾಲೆಗೂ ಕವಿಗಳಿಗೂ ಬಹಳ ಕಾಲದ ನಂಟು. ಇಂಥ ಮಧುರ ಬಾಂಧವ್ಯದ ನೆನಪಿನೊಂದಿಗೆ ಈ ಕಾವ್ಯ ಸಂಪುಟಗಳು ಪ್ರಕಟವಾಗುತ್ತಿವೆ.

"ಕನ್ನಡ ಕವಿತೆಯಲ್ಲಿ ಹೊಸ ಹಸಿರು, ಹೊಸ ಉಸಿರು ಹುಲುಸಾಗಿ ಸೂಸುವಂತೆ ಕಣವಿಯವರು ತಮ್ಮದೇ ಆದ ರೀತಿಯಿಂದ ಹವಣಿಸಿದ್ದಾರೆ. ಇವರ ಕಾವ್ಯಭಂಡಾರದಲ್ಲಿ ಸಹಜ ಶ್ಲೇಷೆಯ ರತ್ನಕಾಂತಿ ನನ್ನ ಮನಸ್ಸನ್ನು ಬಹುವಾಗಿ ಸೆಳೆದಿದೆ........

"ಭಾವೋತ್ಕಟತೆ, ಭಾವಸಾಂದ್ರತೆ ಅಥವಾ ಭಾವತೀವ್ರತೆ ಆಧುನಿಕ ಜೀವನದ ವೈಶಿಷ್ಟ್ಯ ಗ್ರಾಸಿಯಾದ ಅಲಂಕಾರಗಳನ್ನು ಸೃಷ್ಟಿ ಮಾಡಲು ಸಮರ್ಥವಾದಾಗ ಮಾತ್ರ ಸಾರ್ಥಕ್ಯವನ್ನು ಪಡೆಯಬಲ್ಲುದು. ಈ ತತ್ವವನ್ನು ಕಣವಿಯವರು ಚೆನ್ನಾಗಿ ಮನಗಂಡಿರುವುದು ಕನ್ನಡ ಕಾವ್ಯಕ್ಕೆ ಒಂದು ವಿಶ್ವಾಸವನ್ನೂ ಪ್ರತ್ಯಾಸೆಯನ್ನೂ ನೀಡುವಂಥದು........

" 'ಮಧುಚಂದ್ರ'ದಲ್ಲಿ ಬೇಂದ್ರೆಯವರ ರಸರಭಸವಿಲ್ಲ, ಕುವೆಂಪು ಅವರ ಪ್ರಭೋಧಕ ಜೀವನ ವಿಮರ್ಶೆಯಿಲ್ಲ, 'ಮೈಸೂರು ಮಲ್ಲಿಗೆ'ಯ ಸಮತಲ ಹೂನಡಿಗೆಯಿಲ್ಲ. ಆದರೆ ಈ ಮೂವರ ಇತರ ಗುಣಾಂಶಗಳು ಮುಪ್ಪರಿಯಾಗಿ ಕಣವಿಯವರಲ್ಲಿ ಹೊಸದೊಂದು ಪಾಕವಾಗಿ, ವೈಶಿಷ್ಟ್ಯ ಪೂರ್ಣವಾಗಿ ಇಲ್ಲಿ ಅಭಿವ್ಯಕ್ತಿ ಪಡೆದಿವೆ ಎನಿಸುತ್ತದೆ."

—ಡಾ. ಕೆ. ಕೃಷ್ಣಮೂರ್ತಿ

(ಮುನ್ನುಡಿಯಿಂದ)

ತಳುಕಿನ ವೆಂಕಣ್ಣಯ್ಯ ಸ್ಮಾರಕ ಗ್ರಂಥಮಾಲೆ

9, ರಮ್ಯ, ಗೋಕುಲಂ 3ನೇ ಹಂತ, ಮೈಸೂರು-2